


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 | Issue : 170 | Wednesday 12-03-2025 | E-mail : maruti.b.hosamani76@gmail.com | Page: 4 | Price : Rs. 1/-


## ಸಂಘಟಿತ ಹೋರಾಟದಿಂದ ಸಮಸ್ಯೆಗಳಿಗೆ ಪರಿಹಾರ: ತರೀಕೆರೆ ಎನ್.ವೆಂಕಟೇಶ್



**ಸಿಹಿ ಕಹಿ ಸುದ್ದಿ,**

**ತರೀಕೆರೆ :** ರಾಜ್ಯದಲ್ಲಿ ದಲಿತ ಚಳುವಳಿ ಕಟ್ಟಿದವರು ಮಹಾತ್ಮ ಪ್ರೊಫೆಸರ್ ಬಿ.ಕೃಷ್ಣಪ್ಪ ನವರು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕರಾದ ತರೀಕೆರೆ ಎನ್.ವೆಂಕಟೇಶ್ ಹೇಳಿದರು. ಅವರು ಸೋಮವಾರಸಂಜೆ7.ಗಂಟೆಗೆಸೀತಾಪುರದಲ್ಲಿ ಏರ್ಪಡಿಸಿದ್ದ ಬಹುಜನ ದಲಿತ ಸಂಘರ್ಷ ಸಮಿತಿ ಗ್ರಾಮ ಶಾಖೆಯನ್ನು ಉದ್ಘಾಟನೆ ಮಾಡಿಮಾತನಾಡಿದರು.ದಲಿತರುಶೋಷಿತರು ಸಂಘಟಿತ ಹೋರಾಟದಿಂದ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಆದ್ದರಿಂದ ಎಲ್ಲಾ ಶೋಷಿತ ಸಮಾಜದವರು ಸಂಘಟಿತರಾಗ ಬೇಕು ಎಂದು ಕರೆ ಕೊಟ್ಟರು.

ಮಹಾತ್ಮ ಪ್ರೊ. ಬಿ ಕೃಷ್ಣಪ್ಪನವರ ನೇತೃತ್ವದಲ್ಲಿ ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಮಹಿಳೆಯರ ಬೆತ್ತಲೆ ಸೇವೆ ವಿರುದ್ಧ ಹೋರಾಟ ಮಾಡಿ ಮಹಿಳೆಯರ ಮಾನ ಉಳಿಸುವ ಕೆಲಸವನ್ನು ಮಾಡಿದರು ಜಾತ್ರೆಯನ್ನು ನಿಷೇಧ ಮಾಡಲಾಯಿತು.ಭೂಮಿಗೋಸ್ಕರಹೋರಾಟ ಮಾಡಿದ ಮೇಲೆ ಪರಭಾರೆ ನಿಷೇಧ ಕಾಯ್ದೆ ಜಾರಿ ಯಾಯಿತು, ಬೆಂಡಿಗೇರಿ ಪ್ರಕರಣದ ವಿರುದ್ಧ ಹೋರಾಟ ಮಾಡಿದ ಹಿನ್ನೆಲೆಯಲ್ಲಿ ಅಟ್ರಾಸಿಟಿ ಕಾಯಿದೆ ಜಾರಿ ಯಾಯಿತು, ಹೆಂಡ ಸಾರಾಯಿ ಬೇಡ ನಮಗೆ ವಸತಿ ಶಾಲೆ ಬೇಕು ಎಂದು ಹೋರಾಟ ಮಾಡಿದ ಹಿನ್ನೆಲೆಯಲ್ಲಿ ಹೋಬಳಿ ಗೊಂದು ಮುರಾರ್ಜಿ ವಸತಿ ಶಾಲೆಗಳು ಅಂಬೇಡ್ಕರ್ ವಸತಿ ಶಾಲೆಗಳು ಮುಂತಾದ ವಸತಿ ಶಾಲೆಗಳು ಸ್ಥಾಪನೆಗಳಾಗಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ವಕೀಲರಾದ ಶಿವಶಂಕರ್ ನಾಯಕ್ ರವರು ಮಾತನಾಡಿ ಕಾನೂನುಚೌಕಟ್ಟಿನಲ್ಲಿಅಂಬೇಡ್ಕರ್‌ಸಿದ್ಧಾಂತದ ಅಡಿಯಲ್ಲಿ ಹೋರಾಟ ಮಾಡಿ ಒಗ್ಗಟ್ಟಿನಿಂದ ಯಾವುದೇ ಅಧಿಕಾರಿಗಳಾಗಲಿ ರಾಜಕಾರಣಿ ಆಗಲಿ ನಮಗೆ ಸ್ಪಂದಿಸುತ್ತಾರೆ ಗ್ರಾಮದ ಅಭಿವೃದ್ಧಿಗೆ ಸಹಕಾರ ವಾಗುತ್ತದೆ. ಇಂದು ಉದ್ಘಾಟನೆಯಾದ ಸಂಘ ಬೃಹದಾಕಾರವಾಗಿ ಬೆಳೆಯಲಿ ಎಂದು ಹೇಳಿದರು. ದಲಿತ ಮುಖಂಡರಾದ ಎಸ್ ಆನಂದ ಮಾತನಾಡಿ ಕಳೆದ25-30ವರ್ಷಗಳಹಿಂದೆಈಭೂಮಿಗಾಗಿ ಕ.ದ.ಸಂ.ಸ ಹೋರಾಟ ಮಾಡಿದ ನೆನಪನ್ನು ತಿಳಿಸಿದರು. ಸಿದ್ದರಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ವೇಲಾಯುಧನ್ ಮತ್ತು ಎಸ್.ಟಿ ಮಂಜು, ಹಾಗೂ ಕೃಷ್ಣಾಪುರದ ಮಂಜು ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷರಾದ ಹೊನ್ನಪ್ಪಸೀತಾಪುರಗ್ರಾಮಶಾಖೆ ಅಧ್ಯಕ್ಷರಾದ ಸತೀಶ್, ಉಪಾಧ್ಯಕ್ಷರಾದ ಅರ್ಜುನ, ಕಾರ್ಯದರ್ಶಿ ಪರಮೇಶ್, ಖಜಾಂಚಿ ಕರ್ಪ ರವರ ಆಯ್ಕೆಯನ್ನು ಘೋಷಣೆ ಮಾಡಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಘಟನಾ ಸಂಚಾಲಕರಾದ ಬೇಲೇನಹಳ್ಳಿ ಸಿದ್ದಪ್ಪ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿವಿದ್ಯಾರ್ಥಿಗಳಿಗೆನೋಟ್‌ಪುಸ್ತಕ ಮತ್ತು ಪೆನ್ಸಿಲ್ ಹಾಗೂ ನೀರಿನ ಬಾಟಲ್ ಗಳನ್ನು ವಿತರಣೆ ಮಾಡಲಾಯಿತು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್.ವೆಂಕಟೇಶ್. ತರೀಕೆರೆ. ಚಿಕ್ಕಮಗಳೂರು**

## ವಿದ್ಯಾರ್ಥಿ ಬದುಕಿಗೆ ಶ್ರದ್ಧೆ, ಸ್ವಯಂ ಶಿಸ್ತಿನ, ಗುಣ ಮುಖ್ಯ–ಸುಜಾತಾ ಪೂಜಾರಿ



**ಸಿಹಿ ಕಹಿ ಸುದ್ದಿ,**

**ಇಂಡಿ :** "ವಿದ್ಯಾರ್ಥಿಗಳು ಓದುವ, ಬರೆಯುವ, ಜ್ಞಾನ ಬೆಳೆಸಿ ಕೊಳ್ಳುವ ಜೊತೆಗೆ ಬದುಕಿಗೆ ಅಗತ್ಯವಾದ ಮಾನವೀಯ ಮೌಲ್ಯ ಮತ್ತು ಗುಣಗಳನ್ನು ಬೆಳೆಸಿ ಕೊಂಡು ಉತ್ತಮ ಪ್ರಜೆ ಗಳಾಗಬೇಕು" ಎಂದು ಇಂಡಿ ತಾಲೂಕ ಅಕ್ಷರ ದಾಸೋಹ ಅಧಿಕಾರಿ ಸುಜಾತಾ.ಪೂಜಾರಿ ಹೇಳಿದರು.

ಮಂಗಳವಾರ ದಂದು ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್, ಕೆಜಿಎಸ್ ಶಾಲೆಯಲ್ಲಿ "ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ" ವನ್ನು ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ನಿರ್ದಿಷ್ಟ ಗುರಿ ಹೊಂದುವ ಜೊತೆಗೆ ಗುರು ಭಕ್ತಿ, ಶ್ರದ್ಧೆ, ಆಸಕ್ತಿ, ಸ್ವಯಂ ಶಿಸ್ತಿನ ಗುಣಗಳನ್ನು ಮೈಗೂಡಿಸಿ ಕೊಂಡು ಸಾಧನೆಯ ಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು.

ಸರ್ವಜ್ಞ ಕರಿಯರ್ ಅಕಾಡೆಮಿಯ ಸಂಸ್ಥಾಪಕ ನಾಗೇಶ ಹೆಗಡ್ಯಾಳ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ನಾಗರಿಕರಾಗಲು ಸತತ ಪರಿಶ್ರಮ ಅಗತ್ಯ. ವಿದ್ಯಾರ್ಥಿ ಜೀವನ ಬಂಗಾರದ ಜೀವನ ಅದನ್ನು ಸದುಪಯೋಗ ಪಡಿಸಿ ಕೊಂಡು ಒಳ್ಳೆಯ ಅಂಕ ಪಡೆದು ಪಾಲಕರಿಗೆ ಹಾಗೂ ಶಾಲೆಗೆ ಒಳ್ಳೆಯ ಕೀರ್ತಿ ತರಬೇಕೆಂದು ಹಾರೈಸಿದರು.

ಶಿಕ್ಷಕ ಸಂತೋಷ ಬಂಡೆ ಮಾತನಾಡಿ, ಗುರು–ಹಿರಿಯರನ್ನು ಗೌರವಿಸುವ, ಪರಸ್ಪರ ಪ್ರೀತಿ, ಸ್ನೇಹ, ಸಹಬಾಳ್ವೆ ಯಿಂದ ಜೀವನ ಸಾಗಿಸುವ, ಸಕಾರಾತ್ಮಕ ಚಿಂತನೆ, ಸಮಾಜ ಸೇವೆಯಂತಹ ಜೀವನದ ಮೌಲ್ಯಗಳನ್ನು ವಿದ್ಯಾರ್ಥಿ ದಿಸೆಯಿಂದಲೇ ಅಳವಡಿಸಿ ಕೊಳ್ಳಬೇಕು ಎಂದು ಹೇಳಿದರು.

ಕೆಬಿಎಸ್ ಎಸ್.ಡಿ.ಎಂ.ಸಿ ಅಧ್ಯಕ್ಷ ಮಾಳಪ್ಪ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಕೆಜಿಎಸ್ ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಪರಶುರಾಮ ಹೊಸಮನಿ ವಿವಿಧ ವಿಭಾಗದಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿದರು.

ಮುಖ್ಯ ಶಿಕ್ಷಕ ಅನಿಲ ಪತಂಗಿ, ಶಿಕ್ಷಕಿ ಶೃದ್ಧಾ ಬಂಕಲಗಾ ವಾರ್ಷಿಕ ವರದಿ ವಾಚಿಸಿದರು. ಎಸ್.ಡಿ.ಎಂ.ಸಿ ಸದಸ್ಯರಾದ ಕಾಶೀನಾಥ ದಳವಾಯಿ, ಪಡೆವ್ವ ನಡುವಿನಮನಿ, ಶಾಲುಬಾಯಿ ಸೈನಸಾಕಳೆ, ಆರತಿ ಗೊರನಾಳ, ಮುಖ್ಯ ಶಿಕ್ಷಕಿ ವ್ಹಿ.ವೈ ಪತ್ತಾರ ಹಾಗೂ ಶಿಕ್ಷಕರಾದ ಎಸ್.ಎಂ ಪಂಚಮುಖಿ, ಸಾವಿತ್ರಿ ಸಂಗಮದ, ಎಫ್ ಎ ಹೊರ್ತಿ,ಎಸ್ ಡಿ ಬಿರಾದಾರ, ಎಸ್ ಬಿ ಕುಲಕರ್ಣಿ, ಮಲ್ಲಮ್ಮ ಗಿರಣಿವಡ್ಡರ, ಸುಮಿತ್ರಾ ನಂದಗೊಂಡ, ಶಾಂತೇಶ ಹಳಗುಣಕಿ, ಸುರೇಶ ದೊಡ್ಯಾಳಕರ, ಜೆ ಸಿ ಗುಣಕಿ,ಎಸ್ ಎನ್ ಡಂಗಿ, ಬಿ ಎಸ್ ಹೊಸೂರ, ಪ್ರಜ್ವಲ ಕುಲಕರ್ಣಿ ಸೇರಿದಂತೆ ಶಾಲಾ ಮಕ್ಕಳು ಭಾಗವಹಿಸಿದ್ದರು. ಶಿಕ್ಷಕ ಎಸ್ ಆರ್ ಚಾಳೇಕರ ಕಾರ್ಯಕ್ರಮ ನಿರ್ವಹಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಾನಂದ.ಬಿ.ಹರಿಜನ. ಇಂಡಿ**

## ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವಿಪುಲ ಅವಕಾಶಗಳು: ಮಹಾದೇವ ಮುರಗಿ



**ಬಾಗಲಕೋಟೆ :** ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟಯ ವಿದ್ಯಾರ್ಥಿಗಳಿಗಾಗಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಅವಕಾಶಗಳ ಕುರಿತು ಸ್ಟಡಿ ವಿಸ್ಟಾ, ಅಂಧೇರಿ, ಮುಂಬಯಿ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಲಾದ ಒಂದು ದಿನದ ಕಾರ್ಯಾಗಾರವನ್ನು ದಿನಾಂಕ: 03.03.2025 ರಂದು ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಮಹಾದೇವ ಮುರಗಿ, ಸಸಿಗಳಿಗೆ ನೀರೂಣಿಸುವ ಮೂಲಕ ಉದ್ಘಾಟನೆಗೊಳಿಸಿ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಲ್ಲಿ ವಿಪುಲ ಅವಕಾಶಗಳಿದ್ದು, ವಿದ್ಯಾರ್ಥಿಗಳು ಅವುಗಳ ಸದುಪಯೋಗವನ್ನು ಪಡೆದುಕೊಂಡು ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶ್ರೀ ಮುತ್ತು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಸ್ಥಾಪಕರು ಸ್ಟಡಿ ವಿಸ್ಟಾ, ಹಾಗೂ ಶ್ರೀ ಸತೀಶ ಚಂತ್ರಾ, ವಿಷಯ ಉಪನ್ಯಾಸಕರು ಮತ್ತು ತಜ್ಞ ಸಲಹೆಗಾರರು, ಸ್ಟಡಿ ವಿಸ್ಟಾ, ಅಂಧೇರಿ, ಮುಂಬಯಿ ರವರು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಹಾಗೂ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಳ್ಳುವ ಕುರಿತು ವಿದ್ಯಾರ್ಥಿಗಳಿಗೆ ವಿಸ್ತೃತವಾಗಿ ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ. ಬಾಲಾಜಿ ಎಸ್. ಕುಲಕರ್ಣಿ, ಡೀನ್, ತೋಟಗಾರಿಕಾ ಮಹಾವಿದ್ಯಾಲಯ ರವರು ವಿದ್ಯಾರ್ಥಿಗಳ ಒಂದು ಉತ್ತಮ ಭವಿಷ್ಯ ಹಾಗೂ ದೇಶ ವಿದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಲು ಇಂತಹ ಕಾರ್ಯಾಗಾರಗಳ ಅತ್ಯಾವಶ್ಯಕಗಳಾಗಿರುತ್ತವೆಂದು ತಿಳಿಸುತ್ತಾ, ಸದರಿ ಕಾರ್ಯಾಗಾರದ ಸಂಪೂರ್ಣ ಉಪಯೋಗವನ್ನು ಪಡೆದುಕೊಂಡು ವಿದ್ಯಾರ್ಥಿಗಳು ಭವಿಷ್ಯತ್ತಿನಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕೆಂದು ತಿಳಿ ಹೇಳಿದರು.

ಈಕಾರ್ಯಕ್ರಮದಲ್ಲಿವಿವಿಧವಿಭಾಗಗಳಮುಖ್ಯಸ್ಥರು, ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಸಂಯೋಜಕರುಗಳಾದಡಾ.ದಾದಾಪೀರಪೀರ್‌ಜಾದೆ ವಂದಿಸಿದರು. ಡಾ. ಮಹಾಂತೇಶ ನಾಯಕ ಬಿ.ಎನ್., ಸ್ವಾಗತ ಹಾಗೂ ನಿರೂಪಣೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯಾರ್ಥಿನಿಯರಾದ ಕುಮಾರಿ. ಪೂಜಾ ಪ್ರಾರ್ಥಿಸಿದರು.

## ರಸ್ತೆಯ ಮೇಲೆ ಡಾಂಬರೀಕರಣ ಮಾಡಿ 38 ಲಕ್ಷ ರೂಗಳ ಅನುದಾನ ದುರ್ಬಳಕೆ: ನ್ಯಾಯವಾದಿ ಮಿತೇಶ ಪಟ್ಟಣ ಆರೋಪ



**ಅಥಣಿ :** ಅಥಣಿ ಪುರಸಭೆಯಲ್ಲಿ ಮುಖ್ಯಾಧಿಕಾರಿ ಎಂದು ಕಾರ್ಯನಿರ್ವಹಿಸುತ್ತಿರುವ ಅಶೋಕ ಶೀತಾರಾಮ ಗುಡಿಮನಿ ಈಗ ಕಚೇರಿಯ ವ್ಯವಸ್ಥಾಪಕ ಎಂಬ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬದು ಮಾಹಿತಿ ಹಕ್ಕಿನಿಂದ ಬಹಿರಂಗವಾಗಿದೆ.ಅವರು ಪುರಸಭೆ ಮುಖ್ಯಾಧಿಕಾರಿ ಹುದ್ದೆಗೆ ಅನರ್ಹರಾಗಿದ್ದಾರೆ ಎಂದು ನ್ಯಾಯವಾದಿ ಹಾಗೂ ಉತ್ತರ ಕರ್ನಾಟಕ ಯುವಶಕ್ತಿ ಸಂಘದ ಅಧ್ಯಕ್ಷ ಮಿತೇಶ ಪಟ್ಟಣ ಆರೋಪಿಸಿದರು. ಅವರು ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಅಥಣಿ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಾಧಿಕಾರಿ ಅಶೋಕ ಗುಡಿಮನಿ ಕೆಎಂಎಸ್ ಇಲಾಖೆಯ ಪರೀಕ್ಷೆ ಪಾಸ್ ಆಗಿರುವ ಬಗ್ಗೆ ಮಾಹಿತಿ ನೀಡದೇ ಇರುವುದು, ಮತ್ತು ಅವರು ಕಚೇರಿಯ ವ್ಯವಸ್ಥಾಪಕ ಎಂಬ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿದ ಅವರು ಪುರಸಭೆ ಆಡಳಿತದಿಂದ ಇತ್ತೀಚೆಗೆ ಕೈ ಕೊಳ್ಳುತ್ತಿರುವ ಕಾಮಗಾರಿಗಳನ್ನು ಕಳಪೆ ಮಟ್ಟದ ಕಾಮಗಾರಿ ಮಾಡುವ ಮೂಲಕ ಸರ್ಕಾರದ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಇತ್ತೀಚಿಗೆ ಪಟ್ಟಣದ ಡಾ. ಪಾಂಗಿ ಆಸ್ಪತ್ರೆಯಿಂದ ಮರಳು ಶಂಕರ ದೇವರು ಅವರ ವೃತ್ತದವರೆಗೆ ಕೈಗೊಂಡಿರುವ ರಸ್ತೆಯ ಮೇಲೆ ಡಾಂಬರೀಕರಣ ಮಾಡುವ ಮೂಲಕ ಗುತ್ತಿಗೆದಾರರು ಹಾಗೂ ಮುಖ್ಯಾಂಶಗಳು ಹೀಗಿವೆ ಇಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ. ಇದಲ್ಲದೆ ಶಂಕರ ನಗರದಲ್ಲಿರುವ ಉದ್ಯಾನವನದ ತಡೆಗೋಡೆ ತೆರವುಗೊಳಿಸಿ ಸುಮಾರು 18 ಲಕ್ಷ ರೂಪಾಯಿ ವೆಚ್ಚದಲ್ಲಿ ಮತ್ತೆ ಗೋಡೆ ನಿರ್ಮಿಸುವ ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿದ ಅವರು ಸಂಬಂಧಪಟ್ಟ ಮೇಲಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ನ್ಯಾಯವಾದಿ ಮಿತೇಶ್ ಪಟ್ಟಣ ಅಗ್ರಹಿಸಿದರು.

## ರಾಜ್ಯ ಸರಕಾರದ ವಿರುದ್ಧ ಮಾನ್ವಿಯಲ್ಲಿ ಜೆಡಿಎಸ್‌ನಿಂದ ಪ್ರತಿಭಟನೆ




**ಸಿಹಿ ಕಹಿ ಸುದ್ದಿ,**

**ಮಾನ್ವಿ :** ರಾಜ್ಯ ಸರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅನುದಾನವನ್ನು ದುರ್ಬಳಕೆ ಮಾಡಿರುವುದನ್ನು ಖಂಡಿಸಿ ಮಾನ್ವಿಯಲ್ಲಿ ಜೆಡಿಎಸ್ ಪಕ್ಷದಿಂದ ಪ್ರತಿಭಟನೆ ನಡೆಸಲಾಯಿತು. ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಮಾತನಾಡಿ, ಸರಕಾರ ಗ್ಯಾರಂಟಿ ಯೋಜನೆ ನೆಪದಲ್ಲಿ ಎಸ್ಸಿ/ಎಸ್ಟಿ ಅನುದಾನ ದುರ್ಬಳಕೆ ಮಾಡುತ್ತಿದ್ದಾರೆಂದರೆ ಶೋಷಿತ ಜನರಿಗೆ ಮಾಡಿದ ಅನ್ಯಾಯ ಎಂದು ಕಿಡಿಕಾರಿದರು. ಸರಕಾರ ಬಂದಾಗಿನಿಂದ ನೋಡಿದರೆ ಅಭಿವೃದ್ಧಿ ಅನ್ನೋದು ಯಾವುದು ಇಲ್ಲ. ಸರ್ಕಾರ ಬರಿ ಗ್ಯಾರಂಟಿ ಯೋಜನೆಯ ನೆಪದಲ್ಲಿ ಇದೆ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜನಾಂಗಕ್ಕೆ ಅಭಿವೃದ್ಧಿ ಮಾಡುವುದು ಇದೇನಾ ದ್ರೋಹ ಬಗೆಯುವುದಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿ–ಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಬಂಡಿಗಣಿ ಸ್ವಾಮೀಜಿ ಮಠದ ಕಾರ್ಯ ಶ್ಲಾಘನೀಯ

**ಮೂಡಲಗಿ :** ಧಾರ್ಮಿಕ, ಶಿಕ್ಷಣ, ಸಾಮಾಜಿಕ ಕ್ಷೇತ್ರಗಳಲ್ಲಿ ಅವಿರತವಾಗಿ ಸೇವೆ ಸಲ್ಲಿಸುತ್ತಿರುವ ದಾಸೋಹ ಚಕ್ರವರ್ತಿ ಬಂಡಿಗಣಿ ದಾನೇಶ್ವರ ಶ್ರೀಗಳ ಕಾರ್ಯವು ಶ್ಲಾಘನೀಯವಾದದ್ದು ಎಂದು ಶಾಸಕ ಮತ್ತು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ತಮ್ಮ ಇಂಗಿತ ವ್ಯಕ್ತಪಡಿಸಿದರು. ಇತ್ತೀಚೆಗೆ ತಾಲ್ಲೂಕಿನ ಅರಭಾವಿ ಪಟ್ಟಣ ವ್ಯಾಪ್ತಿಯ ಸತ್ತಿಗೇರಿ ತೋಟದ ಬಸವಗೋಪಾಲ ಶಿಕ್ಷಣ ಸಂಸ್ಥೆಯ ಅಡಿಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಭೇಟಿ ನೀಡಿ ಮಾತನಾಡಿದ ಅವರು, ಶಾಲೆಯ ಪ್ರಗತಿ ಕಾರ್ಯಕ್ಕೆ ತಮ್ಮ ಮೆಚ್ಚುಗೆ ಸೂಚಿಸಿದರು.



ಸತ್ತಿಗೇರಿ ತೋಟದಲ್ಲಿ ಕಳೆದ ಎಂಟು ವರ್ಷಗಳಿಂದ ಬಂಡಿಗಣಿ ಮಠದ ಶ್ರೀಗಳು ಬಡ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ನೀಡುತ್ತ ಶೈಕ್ಷಣಿಕ ಸುಧಾರಣೆಗಾಗಿ ಶ್ರಮಿಸುತ್ತಿದ್ದಾರೆ. ಸುಮಾರು ಎಂಟು ನೂರಕ್ಕೂ ಅಧಿಕ ಸಂಖ್ಯೆಯ ಮಕ್ಕಳು ಈ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಆಂಗ್ಲ ಮಾಧ್ಯಮ ಶಾಲೆಯು ಎಲ್ ಕೆ ಜಿ ಯಿಂದ ಏಳನೇ ತರಗತಿ ಮತ್ತು ಕನ್ನಡ ಮಾಧ್ಯಮದ ಪ್ರೌಢ ಶಾಲೆಯನ್ನು ಆರಂಭಿಸುವುದರ ಜೊತೆಗೆ ವಸತಿ ನಿಲಯವನ್ನು ನಿರ್ಮಿಸಿ ಕೊಟ್ಟಿದ್ದಾರೆ. ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಶ್ರೀಗಳ ಕಾರ್ಯವನ್ನು ಇಡೀ ಸಮಾಜವೇ ಕೊಂಡಾಡುತ್ತಿದೆಎಂದುಅವರುಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಮಹಾಲಿಂಗ ಮಾಡಲಗಿ, ದುರದುಂಡಿ ಗ್ರಾಮ ಪಂಚಾಯತಿ ಅಧ್ಯಕ್ಷ ರಾಮಪ್ಪ ಸಣ್ಣಲಗಮನ್ನವರ, ಮಹಾನಿಂಗ ಜೋನಿ, ದುಂಡಪ್ಪ ಬೆಳವಿ, ಹಣಮಂತ ಸೋಲ್ಲಾಪೂರಿ, ಭೀಮಶಿ ಬಂಗಾರಿ, ದುಂಡಪ್ಪ ಸತ್ತಿಗೇರಿ, ಬಸಪ್ಪ ಜೋನಿ, ದುಂಡಪ್ಪ ಒಬ್ಬಟ್ಟಗಿ, ವಿಠ್ಠಲ ಒಬ್ಬಟ್ಟಗಿ, ಗೂಳಪ್ಪ ಮಾನೆಪ್ಪಗೋಳ ಶಾಲೆಯ ಪ್ರಧಾನ ಶಿಕ್ಷಕ ಯಲ್ಲಪ್ಪ ಒಬ್ಬಟ್ಟಗಿ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

## ಎನ್ನೆಸ್ಸೆಸ್ ಯುವ ಜನೋತ್ಸವಕ್ಕೆ ಪ್ರಿಯಾ ಮತ್ತು ಕಾವೇರಿ ಆಯ್ಕೆ



**ಮೂಡಲಗಿ :** ಮಾರ್ಚ 4 ರಿಂದ 8 ರವರೆಗೆ ಐದು ದಿನಗಳ ಕಾಲ ನಡೆಯಲಿರುವ ರಾಷ್ಟ್ರೀಯ ಸೇವಾ ಯೋಜನೆಯ ಯುವ ಜನೋತ್ಸವ ಕಾರ್ಯಕ್ರಮಕ್ಕೆ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಕಲ್ಲೋಳಿ ಪಟ್ಟಣದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಸ್ವಯಂ ಸೇವಕಿ ಪ್ರಿಯಾ ಮಹಾಂತೇಶ ಹುಣಶ್ಯಾಳ ಹಾಗೂ ಕಾವೇರಿ ವಿಠ್ಠಲ ಎಣ್ಣಿ ಆಯ್ಕೆಯಾಗಿದ್ದಾರೆ ಎಂದು ಕಾರ್ಯಕ್ರಮ ಅಧಿಕಾರಿ ಶಂಕರ ನಿಂಗನೂರ ತಿಳಿಸಿದ್ದಾರೆ.

ಕರ್ನಾಟಕ ಸರಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಮಂಗಳೂರು ವಿಶ್ವವಿದ್ಯಾಲಯದಕೆನರಾಕಾಲೇಜು,ಮಂಗಳೂರಿನಲ್ಲಿ ಈ ಶಿಬಿರ ಜರುಗಲಿದೆ.

ಆಯ್ಕೆಯಾದ ಪ್ರಿಯಾ ಮಹಾಂತೇಶ ಹುಣಶ್ಯಾಳ ಹಾಗೂ ಕಾವೇರಿ ವಿಠ್ಠಲ ಎಣ್ಣಿ ಅವರನ್ನು ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸಗೌಡ ಪಾಟೀಲ,

ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ ಅಭಿನಂದಿಸಿದ್ದಾರೆ.

# ದಕ್ಷಿಣ ಭಾರತ ಅಂತರ ವಿಶ್ವ ವಿದ್ಯಾಲಯದ ಕ್ರೀಡೆಗೆ ಮಹಿಳಾ ವಿವಿ ಹ್ಯಾಂಡ್‌ಬಾಲ್ ಕ್ರೀಡಾಪಟುಗಳ ಆಯ್ಕೆ



**ವಿಜಯಪುರ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 2024-25ನೇ ಸಾಲಿನ ದಕ್ಷಿಣ ಭಾರತ ಅಂತರ ವಿಶ್ವವಿದ್ಯಾಲಯದ ಕ್ರೀಡೆಗೆ ಮಹಿಳಾ ವಿವಿಯ ಹ್ಯಾಂಡ್‌ಬಾಲ್ ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ.

ದಕ್ಷಿಣಭಾರತಅಂತರವಿಶ್ವವಿದ್ಯಾಲಯಹ್ಯಾಂಡ್‌ಬಾಲ್ ಕ್ರೀಡೆಯು ಮಾ.3 ರಿಂದ 7 ರವರೆಗೆ ಪರೆಯಾರ್ ವಿಶ್ವವಿದ್ಯಾಲಯ ಸೇಲಂ ಟಿಎನ್ ಜರುಗಲಿದ್ದು, ಈ ಕ್ರೀಡಾಕೂಟದಲ್ಲಿ ಮಹಿಳಾ ವಿವಿಯ ಹ್ಯಾಂಡ್‌ಬಾಲ್ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ.

ತಂಡದ ತರಬೇತಿದಾರರಾಗಿ ಲಕ್ಷ್ಮಿ. ಹನಮರ ಮತ್ತು ವ್ಯವಸ್ಥಾಪಕರಾಗಿ ಪುಷ್ಪಾ.ಮೇಟಿ ಭಾಗವಹಿಸಲಿದ್ದಾರೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

ಆಯ್ಕೆಯಾಗಿರುವ ಕ್ರೀಡಾಪಟುಗಳ ತಂಡಕ್ಕೆ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್. ಎಂ.ಚಂದ್ರಶೇಖರ, ಕ್ರೀಡಾ ನಿರ್ದೇಶನಾಲಯದ ನಿರ್ದೇಶಕ ಹಾಗೂ ಮುಖ್ಯಸ್ಥ ಡಾ. ಹನುಮಂತಯ್ಯ ಪೂಜಾರ, ಸಹ ನಿರ್ದೇಶಕ ವಿಶ್ವನಾಥ ನಡಕಟ್ಟಿ ಮತ್ತು ಶಿಕ್ಷಣ ನಿಕಾಯದ ಡೀನ ಪ್ರೊ. ಸಕ್ಪಾಲ್ ಹೂವಣ್ಣ ಅವರು ಶುಭ ಹಾರೈಸಿದ್ದಾರೆ.

# ಅನಾರೋಗ್ಯದಿಂದಯೋಧಸಾವು



**ವಿಜಯಪುರ :** ಅನಾರೋಗ್ಯದಿಂದ ಬಳಲುತ್ತಿದ್ದ ಯೋಧನೊಬ್ಬ ಮೃತಪಟ್ಟಿದ್ದಾನೆ.

ವಿಜಯಪುರ ಜಿಲ್ಲೆ ದೇವರಹಿಪ್ಪರಗಿ ತಾಲೂಕಿನ ಬೊಮ್ಮನಜೋಗಿ ಗ್ರಾಮದ ಮಲ್ಲಿಕಾರ್ಜುನ ಪೂಜಾರಿ (37) ಮೃತ ಯೋಧ.

ಯೋಧ ಮಲ್ಲಿಕಾರ್ಜುನ ಪೂಜಾರಿ ಅನಾರೋಗ್ಯದ ಕಾರಣರಜೆಮೇಲೆಸ್ವಗ್ರಾಮಕ್ಕೆಆಗಮಿಸಿದ್ದ.ಚಿಕಿತ್ಸೆಗಾಗಿ ಮಲ್ಲಿಕಾರ್ಜುನನನ್ನು ಮಹಾರಾಷ್ಟ್ರದ ಸೊಲ್ಲಾಪುರದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಯೋಧ ಸಾವನ್ನಪ್ಪಿದ್ದಾನೆ.

ಮೃತ ಯೋಧನಿಗೆ ಪತ್ನಿ, ಮೂವರು ಮಕ್ಕಳು, ತಂದೆ ತಾಯಿ ಹಾಗೂ ಅಪಾರ ಬಂಧು ಬಳಗವಿದೆ.

ಬೊಮ್ಮನಜೋಗಿ ಗ್ರಾಮದಲ್ಲಿ ಯೋಧನ ಪಾರ್ಥಿವ ಶರೀರ ಮೆರವಣಿಗೆ ಮಾಡಲಾಯಿತು. ಆನಂತರ ಸಾರ್ವಜನಿಕರ ದರ್ಶನಕ್ಕಾಗಿ

ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಪಾರ್ಥಿವ ಶರೀರವನ್ನು ಕೆಲ ಹೊತ್ತು ಇಡಲಾಗಿತ್ತು.

ಬಳಿಕ ಸಕಲ ಸರ್ಕಾರಿ ಗೌರವಗಳೊಂದಿಗೆ ಯೋಧನ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕುಟುಂಬಸ್ಥರ ರೋಧನ ಮುಗಿಲು ಮುಟ್ಟಿತ್ತು. ಇಡೀ ಗ್ರಾಮ ದುಃಖಸಾಗರದಲ್ಲಿ ಮುಳುಗಿತ್ತು.

# ವಿಶ್ವ ಶ್ರವಣ ದಿನಾಚರಣೆ: ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ



**ವಿಜಯಪುರ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು, ಸರ್ಕಾರಿ ನರ್ಸಿಂಗ್ ಕಾಲೇಜ ಹಾಗೂ ವಿವಿಧ ನರ್ಸಿಂಗ್ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಶ್ರವಣ ದಿನಾಚರಣೆಯ ಪ್ರಯುಕ್ತ ಸೋಮವಾರ ಬೆಳಿಗ್ಗೆ ಹಮ್ಮಿಕೊಂಡ ಜನಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕ ಡಾ.ಚನ್ನಮ್ಮ ಕಟ್ಟಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸಂಪತ್ತ ಗುಣಾರಿ ಜಂಟಿಯಾಗಿ ಚಾಲನೆ ನೀಡಿದರು.

ಈ ಜಾಥಾವು ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಆರಂಭಗೊಂಡು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದವರೆಗೆ ಬಂದು ಸಮಾರೋಪಗೊಂಡಿತು.

ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕ ಡಾ.ಚನ್ನಮ್ಮ ಕಟ್ಟಿ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಹೆಚ್ಚುತ್ತಿರುವ ಶಬ್ದಮಾಲಿನ್ಯದಿಂದ ಶ್ರವಣದೋಷ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ರೇಡಿಯೋ, ಟಿ.ವಿ, ಮೊಬೈಲ್ ಶಬ್ದ ಸೇರಿದಂತೆ ಹೆಡ್ ಸೆಟ್‌ಗಳ ಅಧಿಕ ಬಳಕೆಯಿಂದಾಗಿ ಕಿವಿಯ ಒಳಭಾಗದ ನರಕೋಶಗಳು ದುರ್ಬಲಗೊಂಡು ಶ್ರವಣ ದೋಷಕ್ಕೆ ಎಡೆ ಮಾಡಿದಂತಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸಂಪತ್ತ ಗುಣಾರಿ ಮಾತನಾಡಿ, ಆಹಾರ ಪದಾರ್ಥಗಳನ್ನು ಅಗೆಯುವಾಗ ದವಡೆಯ ಚಲನೆಯಿಂದಾಗಿ ಸಹಜವಾಗಿ ಕಿವಿಯಲ್ಲಿನ ಸೂಕ್ಷ್ಮ ಹಾಗೂ ಸಣ್ಣ ಕುಗ್ಗೆ ಕಣಗಳು ತಾವಾಗಿಯೇ ಹೊರಬರುತ್ತವೆ. ಹಾಗಾಗಿ ಸ್ವಚ್ಛತೆಗಾಗಿ ಕಿವಿಯ ಒಳ ಭಾಗದ ಎಣ್ಣೆ, ಕಡ್ಡಿ, ಪಿನ್ನು, ಬಡ್ಸ್ ಗಳನ್ನು ಹಾಕುವುದರ ಬದಲಾಗಿ ಕಿವಿಯ ಹೊರಭಾಗದಲ್ಲಿ ಒದ್ದೆಬಟ್ಟೆಯಲ್ಲಿ ಕಿವಿಯ ಮೇಲ್ಭಾಗ ಸ್ವಚ್ಛ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ವರಿ ಗೊಲಗೇರಿ, ಬಸವನ ಬಾಗೇವಾಡಿ ತಾಲೂಕು ಆರೋಗ್ಯಾಧಿಕಾರಿ ಡಾ. ಕವಿತಾ ದೊಡ್ಡಮನಿ, ಡಾ.ಪರಶುರಾಮ ಹಿಟ್ನಳ್ಳಿ, ಡಾ. ರವಿ ಅಂಬೇವಾಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಜಿ.ಎಂ ಕೊಲೂರ, ಸುರೇಶಹೊಸಮನಿ,ಆರೋಗ್ಯಇಲಾಖೆಯ ಸಿಬ್ಬಂದಿ ವರ್ಗ, ಸರ್ಕಾರಿ ನರ್ಸಿಂಗ್ ಶಾಲೆಯ ಮತ್ತು ವಿವಿಧ ನರ್ಸಿಂಗ್ ಕಾಲೇಜಗಳ ಉಪನ್ಯಾಸಕರು ವಿದ್ಯಾರ್ಥಿ, ವಿದ್ಯಾರ್ಥಿನೀಯರು ಉಪಸ್ಥಿತರಿದ್ದರು.

# ಪೂರ್ಣಗೊಂಡ ಕಬ್ಬು ಕಟಾವು ಕೆಲಸ: ಡಿಜೆ ಹಚ್ಚಿ ಸಂಭ್ರಮಿಸಿದ ಕಾರ್ಮಿಕರು



**ಇಂಡಿ :** ಸತತವಾಗಿ 4 ರಿಂದ 5 ತಿಂಗಳವರೆಗೆ ಸಾಮಾನ್ಯವಾಗಿ ನಡೆಯುವ ಸಕ್ಕರೆ ಕಾರ್ಖಾನೆಗಳಿಗೆ ಕಾರ್ಮಿಕರು ಕಬ್ಬು ಕಟಾವು ಕೆಲಸ ಪೂರೈಸಿದ್ದು, ತಮ್ಮ ಜವಾಬ್ದಾರಿಯಿಂದ ರೈತ ಬೆಳೆದ ಕಬ್ಬು ಕಟಾವು ಮಾಡುವುದರ ಮೂಲಕ ಸುಮಾರು 2400ಕ್ಕೂ ಹೆಚ್ಚು ಟನ್ ಕಬ್ಬಿನ ತೂಕ ಸಂಗ್ರಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸೋಮವಾರ ಸಂಜೆ ಶಿರಗೂರ ಗ್ರಾಮದಲ್ಲಿ ಜೈ ಭವಾನಿ ಕಬ್ಬಿನ ಗ್ಯಾಂಗ್ ಡಿಜೆ ಹಚ್ಚಿ ಹಬ್ಬದಂತೆ ಸಂಭ್ರಮಿಸಿದರು.

ತುಳನೂರ ಎಸ್‌ಆರ್‌ಎಸ್ ಸೌಂಡ್ ಸಿಸ್ಟಮ್ ಮೂಲಕ ರೇಣುಕಾ ಎಲ್ಲಮ್ಮ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆ ಬಡವಣೆಯ ರಸ್ತೆ ಬದಿಗಳಲ್ಲಿ ಅದ್ದೂರಿಯಾಗಿ ಸಾಗಿತು.

ಮೆರವಣಿಗೆಯಲ್ಲಿ ಗ್ರಾಮಸ್ಥರು ಅಪಾರ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ವಿವಿಧ ಗೀತೆಗಳಿಗೆ ಹಾಗೂ ದಾರಿಯುದ್ದಕ್ಕೂ ಪರಸ್ಪರ ಗುಲಾಲು ಎರಚಿಕೊಂಡು, ಚುರುಮುರಿ ಹರಿಸುತ್ತಾ ಕೇಸರಿ ಧ್ವಜ ಹಿಡಿದು ಜೈ ಭವಾನಿ ಗ್ಯಾಂಗ್ ಎಂದು ಘೋಷಣೆ ಹಾಕುತ್ತ ಕುಣಿದು ಕುಪ್ಪಳಿಸಿದರು.

ಗ್ರಾಮಸ್ಥರಿಗೆ ದೃಶ್ಯ ಕಣ್ತುಂಬಿಕೊಳ್ಳಲು ಅದಕ್ಕೂ ಹೆಚ್ಚು ಜನ ಟ್ರ್ಯಾಕ್ಟರ್ ಅಲಂಕಾರ ಮತ್ತು ಯುವಕರ ಹೆಜ್ಜೆ ನೋಡಲು ರಾತ್ರಿ ನೂರಾರು ಸಂಖ್ಯೆಯಲ್ಲಿ ಸೇರಿದರು.

ಪ್ರತಿ ವರ್ಷವೂ ಜೈ ಭವಾನಿ ಕಬ್ಬಿನ ಗ್ಯಾಂಗ್ ಟ್ರ್ಯಾಕ್ಟರ್ ಮಾಲೀಕನಿಂದ ಕಬ್ಬು ಕಟಾವುಗಾರರಿಗೆ ಬಟ್ಟೆ ಉಡುಗೊರೆ ಜೊತೆಗೆ ಊಟದವ್ಯವಸ್ಥೆಯೊಂದಿಗೆಸಂತೋಷದಿಂದ ಬೀಳ್ಕೊಕೊಡಲಾಗುವುದು.

ಈ ಸಂದರ್ಭದಲ್ಲಿ ಕಬ್ಬಿನ ಟ್ರ್ಯಾಕ್ಟರ್ ಮಾಲೀಕರಾದ ಚಂದ್ರಶ ಗೋಡ್ಕೆ, ಹಿರೋಜ್ ಗೋಡ್ಕೆ, ಟ್ರ್ಯಾಕ್ಟರ್ ಚಾಲಕ ಶಿವಾನಂದ್ ಗೋಡ್ಕೆ, ಕಬ್ಬು ಕಟಾವುಗಾರರು. ಬಸಯ್ಯ ಹೀರೆಮಠ, ಸೋಮಯ್ಯ ಹೀರೆಮಠ,ಉಮೇಶ್ ಗೋಲಗೇರಿ, ಮಂಜುನಾಥ್ ನಾವದಗಿ, ವಿಜಯಕುಮಾರ್ ಕೋಳಿ, ಸಿದ್ದರಾಮ ಹಿರೇಮಠ,

ಭೈರಪ್ಪ ಭೋವಿ, ಉಮೇಶ್ ಅಪ್ಪಾಗಿರಿ,ಸಿದ್ದರಾಮ್ ಗೋಡೆಕರ್, ಶಿವರಾಜ್ ಬೋವಿ, ಖಾಜಪ್ಪ ಮಡ್ಡೆ, ಪರಶುರಾಮ ಮಡ್ಡೆ, ಹಾಗೂ ಗ್ರಾಮಸ್ಥರು ಸೇರಿದಂತೆ ಇನ್ನಿತರರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಯಾವುದೇ ಹಿತಕರ ಘಟನೆ ನಡೆದಂತೆ ಗ್ರಾಮದ ಹಿರಿಯ ಮುಖಂಡರಾದ ಮಾಜಿ ಗ್ರಾಪಂ ಸದಸ್ಯ ಭೀಮಶಂಕರ ನಾಯಕೋಡಿ,ಯಲ್ಲಪ್ಪ ಅಪ್ಪಾಗಿರಿ, ಭೀಮಶಂಕರ ಪೂಜಾರಿ, ಕೋಳಿ, ಭೀರಪ್ಪ ಪೂಜಾರಿ, ಸಿದ್ದರಾಯ ಕೇಗಾಂವ,ಮೆರವಣಿಗೆ ವಹಿಸಿ ಅತ್ಯಂತ ಮುತುವರ್ಜಿಯಿಂದ ಶಾಂತಿಯುತವಾಗಿ ನಡೆಸಿಕೊಟ್ಟರು.

# ಕಾರ್ಮಿಕರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸುರಕ್ಷತೆ ಮುಖ್ಯ: ದಿನೇಶ ಶರ್ಮಾ




**ಮಹಾಲಿಂಗಪುರ :** ಸುರಕ್ಷತೆ ಎಂದರೆ ಕೆಲಸದ ಸ್ಥಳದಲ್ಲಿ ಅಪಘಾತ ತಪ್ಪಿಸುವುದು ಮಾತ್ರವಲ್ಲ, ಕೆಲಸದ ಸ್ಥಳದಲ್ಲಿ ಮತ್ತು ಹೊರಗೆ ಉದ್ಯೋಗಿಗಳ ಹಾಗೂ ಕಾರ್ಮಿಕರ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಕೂಡ ಕಾಪಾಡುವದು ಅಗತ್ಯವಾಗಿದೆ ಎಂದು ಸಿಟಿಓ ದಿನೇಶ ಶರ್ಮಾ ಹೇಳಿದರು.

ಸಮೀಪದ ಸೈದಾಪೂರ ಗ್ರಾಮದ ಸಮೀರವಾಡಿಯ ಗೋದಾವರಿ ಬಯೋ ರಿಫೈನರೀಜ್ ಲಿ. ಕಾರ್ಖಾನೆಯಲ್ಲಿ ಮಂಗಳವಾರ ಜರುಗಿದ 54 ನೇ ರಾಷ್ಟ್ರೀಯ ಸುರಕ್ಷತಾ ದಿನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾರ್ಮಿಕರ ಮಾನಸಿಕ ಆರೋಗ್ಯ ಮತ್ತು ನೆಮ್ಮದಿಯು ಮುಖ್ಯ. ಇದು ಅಪಘಾತಗಳು ಮತ್ತು ಅದರಿಂದಾಗುವ ಗಾಯಗಳಿಗೆ ಕಾರಣವಾಗುವ ತಪ್ಪುಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದರು.

ಇಂಜನಿಯರಿಂಗ್ ಜಿ ಎಂ ವಿ. ಕೆ. ಕಿಲಾರಿ ರಾಷ್ಟ್ರೀಯ ಸುರಕ್ಷತಾ ಇತಿಹಾಸದ ಕುರಿತು ಮಾತನಾಡಿದರು.

ಕೇನ್ ವಿಭಾಗದ ಜಿ ಎಂ ವಿ. ಎಸ್. ಕಣಬೂರ ಸುರಕ್ಷತಾ ಧ್ವಜಾರೋಹಣ ಮಾಡಿದರು.

ಸಿಟಿಓ ದಿನೇಶ ಶರ್ಮಾ ಸುರಕ್ಷತಾ ಪ್ರಮಾಣ ವಚನ ಬೋಧಿಸಿದರು.

ಮುಖ್ಯ ಅತಿಥಿಗಳಾಗಿ ಕಾರ್ಖಾನೆಯ ಮುಖ್ಯಸ್ಥ ಬಿ. ಆರ್. ಬಕ್ಷಿ, ನಂದಕುಮಾರ, ಡಿ. ಎನ್. ಪಾಟೀಲ್, ಎಂ. ವಿ. ಕಡಿವಾಲ್, ಆರ್. ವಿ. ಸೋನವಾಲಕರ, ರವಿ ದೇಶಪಾಂಡೆ, ಕಲಪೇಶ ಬಾಂಡೆಕರ್, ಮಜದೂರ್ ಯುನಿಯನ್ ಕಾರ್ಯಧ್ಯಕ್ಷ ಬಸು ಮೇಲಪ್ಪಗೋಳ, ಬಸವರಾಜ ಭದ್ರಶೆಟ್ಟಿ ಸೇರಿದಂತೆ ಇನ್ನೂ ಹಲವರು ಪಾಲ್ಗೊಂಡಿದ್ದರು. ಎಂ.ರಾಮಚಂದ್ರ ಸ್ವಾಗತಿಸಿ-ನಿರೂಪಿಸಿದರು. ಆನಂದ ಕೊಟಬಾಗಿ ವಂದಿಸಿದರು.

## ರಾಮಸ್ವಾಮಿ ಅಜ್ಜನ ಜಾತ್ರೆ: ವಿವಿಧ ಉಚಿತ ಸೇವೆ



**ಬಾಗಲಕೋಟೆ :** ತಾಲ್ಲೂಕಿನ ರಾಮಾಯಣದ ಐತಿಹಾಸಿಕ ಪುರಾಣ ಗ್ರಾಮ ಆಗಿರುವ ಸೀತಿಮನಿ-ರಾಂಪೂರಗ್ರಾಮಗಳ ಆರಾಧ್ಯದೈವ ರಾಮಸ್ವಾಮಿ ಧರ್ಮರ ಮಠದ ಜಾತ್ರೆಗೆ ಅದ್ದೂರಿ ಚಾಲನೆ ನೀಡಲಾಯಿತು.

ಈರಾಮಸ್ವಾಮಿಅಜ್ಜನವರಜಾತ್ರೆಗೆ ಒಂದು ತಿಂಗಳ ಮುಂಚಿತವಾಗಿ ಕಾರ್ತಿಕ ಮಾಸದಂತೆ ಪ್ರತಿ ಸೋಮವಾರ ಉಪವಾಸದ ವೃತವನ್ನು ಸುತ್ತಮುತ್ತಲಿನ ರಾಂಪೂರ,ಸೀತಿಮನಿ,ಸೀತಿಮನಿ ತಾಂಡಾ, ಆಲೂರು, ಮಾಸ್ತಿಹಾಳ, ತಿಮ್ಮಾಪೂರ, ಮನಹಳ್ಳಿ, ಹೊಸೂರು, ನಾಗಸಂಪಗಿ, ಗುಳಬಾಳ, ಮುತ್ತತ್ತಿ ಸೇರಿದಂತೆ ವಿವಿಧ ಗ್ರಾಮಗಳ ಸದ್ಭಕ್ತರು ಆಚರಣೆ ಮಾಡುತ್ತಾ ಬಂದು ಇಂದು ಮುಕ್ತಾಯಗೊಳಿಸಿದರು.

ಈ ಗ್ರಾಮಗಳಿಂದ ಸೀತಿಮನಿ ಗ್ರಾಮದರಾಮಸ್ವಾಮಿಅಜ್ಜನವರು ಮತ್ತು ಮಾತಾ ಕಲ್ಯಾಣತಾಯಿ ಧರ್ಮರ ಮಠಗಳಿಗೆ ಬರುವ ಭಕ್ತರಿಗೆ ಹಳೆ ರಾಂಪೂರಿನ ಸ್ವಾಭಿಮಾನ ಬಳಗದ ಮುಖಂಡ ವೀರೇಶ ಕೊಣ್ಣೂರ ಅವರ ನೇತೃತ್ವದಲ್ಲಿ ಉಚಿತ ಅಟೋ ಸೇವೆ, ಅಂಬಲಿ ಸೇವೆ, ಪ್ರಸಾದ ಸೇವೆಯನ್ನು ಹಮ್ಮಿಕೊಂಡಿದ್ದರು.

ಈ ಉಚಿತ ಸೇವೆಗಳಿಗೆ ಬಸಯ್ಯ ಹಿರೇಮಠ ಅವರು ಚಾಲನೆ ನೀಡಿದರು.

ಅಮಾತೆಪ್ಪ ಮಂಕಣಿ, ಯಲಗೂರದಪ್ಪ ಕಾಳಗಿ, ಚನ್ನಪ್ಪ ಹಕಾರಿ, ಭರಮಪ್ಪ ಹ ೦ ಚಿ ನಾ ಳ , ರ ವ ೇ ಶ ಕೊಣ್ಣೂರ, ಸಂಗಪ್ಪ ಭಜಂತ್ರಿ, ಮಲ್ಲಪ್ಪ ಕೆಂಜೋಡಿ, ಗ್ಯಾನಪ್ಪ ಮಕಾಶಿ, ಚಂದ್ರು ಕಾಳಗಿ, ಮಂಜುನಾಥ ವಡೇಯರ, ರಾಘು ಕೆಂಜೋಡಿ, ಶಿವರಾಜ ಹಕಾರಿ, ಸಿದ್ದು ಕೊಣ್ಣೂರು, ಸಗರಪ್ಪ ಮಾದರ, ಸಿದ್ರಾಮಪ್ಪ ಹಕಾರಿ, ಮಲ್ಲಿಕಾರ್ಜುನ ಕೊಣ್ಣೂರ, ಬೀರಪ್ಪ ಬಿರಲದಿನ್ನಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ದರೋಡೆ, ಜಾತಿನಿಂದನೆ ಆರೋಪ: 10 ಜನರ ಬಂಧನ

**ರಬಕವಿ-ಬನಹಟ್ಟಿ :** ವ್ಯಕ್ತಿಯೋರ್ವನಿಗೆ ಹಣಕ್ಕಾಗಿ ಪೀಡಿಸುತ್ತಿದ್ದ ಹತ್ತು ಜನರ ತಂಡವೊಂದನ್ನು ಪೊಲೀಸರು ಬುಧವಾರ ಬೆಳಿಗ್ಗೆ ಬಂಧಿಸಿದ ಘಟನೆ ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ನಾವಲಗಿಯಲ್ಲಿ ನಡೆದಿದೆ.

ಬನಹಟ್ಟಿಯ ಶಿವಲಿಂಗ ಗೊಂಬಿಗುಡ್ಡ, ಪ್ರಶಾಂತ ನಾಯಕ, ರವಿ ಕರಿಶೆಟ್ಟಿ, ಈಶ್ವರ ಹೊಸೂರ, ಪ್ರದೀಪ ದೇಶಪಾಂಡೆ, ಸಂಗಪ್ಪ ಮಾದರ, ದಾನಪ್ಪ ಶಿರೋಳ, ನರಸಿಂಹ ಗಡಕರ, ದಾನೇಶ ಭಜಂತ್ರಿ, ಮಂಜುನಾಥ ವಿ. ಎಂ. ಬಂಧಿತ ಆರೋಪಿಗಳಾಗಿದ್ದಾರೆ.

ನಾವಲಗಿಯ ಯಮನಪ್ಪ ಮಂಟೂರ ಅವರಿಗೆ ಹಣ ನೀಡುವಂತೆ ಪೀಡಿಸಿ ಅವರಿಂದ ಒತ್ತಾಯಪೂರ್ವಕವಾಗಿ ಹಣ ವಸೂಲಿ ಮಾಡಿ ಪದೇ ಪದೇ ಹಣದ ಬೇಡಿಕೆ ಇಡುತ್ತಿದ್ದರು. ಈಚೆಗೆ ಹಣ ನೀಡದ ಕಾರಣ ಜಾತಿ ನಿಂದನೆ ಮಾಡಿ ಹೊಡೆದು ಟಾವೆಲ್ನಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಲು ಯತ್ನಿಸಿದ್ದಲ್ಲದೆ ಮನೆಯಲ್ಲಿನ ಸುಮಾರು ಮೂರು ಲಕ್ಷ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ದೋಚಿಕೊಂಡು ಹೋಗಿದ್ದಾರೆಂದು ಆತನ ಪತ್ನಿ ಚಂದ್ರವ್ವ ಯಮನಪ್ಪ ಮಂಟೂರ ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

ಘಟನೆ:ಕಳೆದಜನೇವರಿ26ರಿಂದಫಿರ್ಯಾಧಿಪತಿಯ ಮೇಲೆ ಬನಹಟ್ಟಿಯ ನಗರಸಭೆ ಎದುರಿನ ಖಾಸಗಿ ಯುಟ್ಯೂಬ್ ಚಾನೆಲ್ ಕಚೇರಿಯಲ್ಲಿ ಹಣಕ್ಕಾಗಿ ಪೀಡಿಸಿದ್ದರೆಂದು ಪ್ರಕರಣದಲ್ಲಿ ದಾಖಲಾಗಿದೆ. ಇಲ್ಲಿಯವರೆಗೂ ನಿರಂತರ ಮಾನಸಿಕ ಹಿಂಸೆ ನೀಡುತ್ತಿದ್ದ ಆರೋಪಿತರು ಯಮನಪ್ಪ ಮಂಟೂರ ಮನೆಗೆ ತೆರಳಿ ಆತನ ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಹೊತ್ತೊಯ್ದ ಪರಿಣಾಮ ಆತ ವಿಷ ಸೇವಿಸಿದ್ದು, ಕಳೆದೊಂದು ವಾರದಿಂದ ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆಂದು ಫಿರ್ಯಾಧಿಯಲ್ಲಿ ಆತನ ಪತ್ನಿ ಸ್ಪಷ್ಟಪಡಿಸಿದ್ದಾರೆ.

ಇವೆಲ್ಲದರ ಕುರಿತು ಮಾಹಿತಿ ಕಲೆ ಹಾಕಿದ ಪೊಲೀಸ್ ತಂಡ ಮಂಗಳವಾರದಂದು ಬೆಳಿಗ್ಗೆ ಎಲ್ಲ ಹತ್ತು ಜನ ಆರೋಪಿತರನ್ನುಬಂಧಿಸುವಲ್ಲಿಯಶಸ್ವಿಯಾಗಿದ್ದಾರೆ. ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಡಿವೈಎಸ್ಪಿ ಈ. ಶಾಂತವೀರ ಹಾಗು ಪಿಎಸ್‌ಐ ಶಾಂತಾ ಹಳ್ಳಿ ತನಿಖೆ ಮುಂದುವರೆಸಿದ್ದಾರೆ. ಜನೇವರಿ 26 ರಂದು ಈ ಘಟನೆ ನಡೆದಿದ್ದರೂ ಪೋಲೀಸರು ಇಂದಿನವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

# ತೇರದಾಳದಲ್ಲಿ ಇ-ಖಾತೆ ಉತಾರ ಕುರಿತು ಜಾಗೃತಿ

**ತೇರದಾಳ :** ಇಲ್ಲಿನ ಪುರಸಭೆ ಅಧಿಕಾರಿಗಳು ಇ-ಖಾತೆ ಉತಾರ ಕುರಿತು ಬುಧವಾರ ಸಾರ್ವಜನಿಕರಿಗೆ ಕರ ಪತ್ರಗಳ ವಿತರಣೆ ಜೊತೆಗೆ ಆಯಾ ಭಾಗಗಳಿಗೆ ತೆರಳಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಪ್ರಾರಂಭಿಸಿದರು.

ಕುಡಚಿ ರಸ್ತೆಯ ಒಂದನೇ ಕಾಲುವೆ ಹತ್ತಿರ ನಿವಾಸಿಗಳಿಗೆ ಇ-ಖಾತೆ ಉತಾರ ಮಾಡಿಕೊಳ್ಳಲು ನೀಡಬೇಕಾದ ದಾಖಲೆಗಳ ಕುರಿತು ಮಾಹಿತಿ ನೀಡಿದರು. ಸಕಾಲಕ್ಕೆ ಆಸ್ತಿ ತೆರಿಗೆ, ನೀರಿನ ಕರ ಪಾವತಿಸುವಂತೆ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಸೂಚನೆ ನೀಡಿದರು. ಈಗಾಗಲೇ ಇ-ಖಾತೆ ಉತಾರ ನೀಡಲು ಪ್ರಾರಂಭಿಸಲಾಗಿದೆ. ಕೆಲವು ಕರದಾತರ ಹತ್ತಿರ ಸೂಕ್ತ ದಾಖಲೆಗಳು ಇಲ್ಲದ ಕಾರಣ ಇ-ಖಾತೆ ಉತಾರ ಮಾಡಿಕೊಡಲು ಸಾಧ್ಯವಾಗುತ್ತಿಲ್ಲ. ಸಾಧ್ಯವಾದಷ್ಟು ಅಗತ್ಯ ದಾಖಲೆಗಳನ್ನು ಸಾರ್ವಜನಿಕರು ಒದಗಿಸಬೇಕೆಂದು ಹೇಳಿದರು. ಪುರಸಭೆ ವ್ಯಾಪ್ತಿಯೊಳಗಿನ



ಆರ್ಟಿಸಿ ಪಹಣಿ ಹೊಂದಿದವರು ಜಮೀನುಗಳಲ್ಲಿ ಮನೆ ಕಟ್ಟಿಕೊಂಡಿದ್ದರೆ ಕಟ್ಟಿದ ಜಾಗವನ್ನು ಬಿ-ಖಾತೆ ಮುಖಾಂತರ ಪುರಸಭೆ ವ್ಯಾಪ್ತಿಗೆ ಒಳಪಡಿಸಿಕೊಂಡು ಇ-ಉತಾರ ನೀಡಲಾಗುವುದು. ಸರಕಾರ ಜಾರಿಗೊಳಿಸಿರುವ ಹೊಸ ಯೋಜನೆಯನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕೆಂದು ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಹೇಳಿದರು. ಕಂದಾಯ ಅಧಿಕಾರಿ ಎಫ್. ಬಿ. ಗಿಡ್ಡಿ, ಚಂದ್ರಕಾಂತ ಕಾಂಬಳೆ, ಭರಮು ಧನಗರ, ಗದಗೆಪ್ಪ ಕುಂಬಾರ, ವಿಷ್ಣು ಘಟ್ಟೆನ್ನವರ ಇನ್ನಿತರರು ಹಾಜರಿದ್ದರು.

> **ಇ-ಖಾತೆ ಉತಾರ ಮಾಡಲು ಜಾಗವು ಹೇಗೆ ಬಂದಿದೆ ಎಂಬುದರ ಬಗ್ಗೆ ದಾಖಲೆ ನೀಡಲು ಹೇಳುತ್ತಿದ್ದಾರೆ. ಆದರೆ ಮನೆ, ನಿವೇಶನ, ಭೂಮಿ ಹಿರಿಯರಿಂದ ಬಂದಿದ್ದರೆ ಅವರಿಗೆ ಹೇಗೆ ಬಂತು ಎಂಬುದರ ದಾಖಲೆ ನೀಡಲು ಹೇಳುತ್ತಾರೆ. ಅಂತಹ ದಾಖಲೆಗಳು ಈಗ ನಾವು ಎಲ್ಲಿಂದ ತರಬೇಕು. ಅಜ್ಜನಿಂದ ಅಪ್ಪನಿಗೆ, ಅಪ್ಪನಿಂದ ಮಗನಿಗೆ ಹೀಗೆ ಆಸ್ತಿಗಳು ಬಂದಿರುತ್ತವೆ. ಅದನ್ನು ಬಿಟ್ಟು ನಿಮ್ಮ ಮನೆತನಕ್ಕೆ ಜಾಗ ಯಾರಿಂದ ಯಾವಾಗ ಬಂದಿದೆ ಎಂಬ ದಾಖಲೆ ನೀಡಿ ಅಂದರೆ ಹೇಗೆ ? ಆದ್ದರಿಂದ ಈ ಬಗ್ಗೆ ಅಧಿಕಾರಿಗಳು ಸಾರ್ವಜನಿಕರಿಗೆ ಸಹಕಾರ ನೀಡಬೇಕು.**
>
> **- ಆದಿನಾಥ ಸಪ್ತಸಾಗರ.**
> **ಪುರಸಭೆ ಸದಸ್ಯ**

# ಗವಿಮಠ ಪ್ರತಿಷ್ಠಾನದಿಂದ ಶಿಕ್ಷಕರಿಗೆ ಗೌರವ ಸನ್ಮಾನ

**ಬಾಗಲಕೋಟೆ :** ಜಮಖಂಡಿ ತಾಲೂಕಿನ ಮಧುರಖಂಡಿಯಲ್ಲಿ ನಡೆದ ಗವಿಮಠ ಪ್ರತಿಷ್ಠಾನದ"ಬೆಳ್ಳಿ ಬೆಳಕು" ಸಂಭ್ರಮದ ನಿಮಿತ್ಯ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಹಾಗೂ ಸಾಧಕ ಶ್ರೇಷ್ಠ ಶಿಕ್ಷಕರಿಗೆ ಗೌರವ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಬದಾಮಿ ತಾಲೂಕಿನ ಶಿಕ್ಷಕರುಗಳಾದ ಹುಸೇನ್ ಬಾಯಿ ದಂಪತಿಗಳು, ಅಶ್ವಿನಿ ಅಂಗಡಿ, ನಾಗರಾಜ, ಜಾಧವ, ನಾಯಕ, ಪಾಟೀಲ್, ಚಿಕ್ಕೂರ್ ಹಾಗೂ ಸೂಳಿಕೇರಿ ಶಿಕ್ಷಕರುಗಳಿಗೆ "ಗುರು ಶ್ರೇಷ್ಠ " ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಸಮಾರಂಭದ ಉದ್ಘಾಟಕರಾಗಿ ಶಂಕರಗೌಡ ಸೋಮನಾಳ ಕುಲ ಸಚಿವರು ಅಕ್ಕಮಹಾದೇವಿ ವಿಶ್ವವಿದ್ಯಾಲಯ ವಿಜಯಪುರ, ಮುಖ್ಯ ಅತಿಥಿಗಳಾಗಿ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷರು ಜಿಲ್ಲಾ ಕ ಸಾ ಪ ಬಾಗಲಕೋಟೆ, ಎಮ್. ವಿವೇಕಾನಂದ ಉಪನಿರ್ದೇಶಕರು ಸಾ ಶಿ ಇ ,



ಶಾಂತವೀರ ಈ. ಪೊಲೀಸ ಉಪ ಅಧೀಕ್ಷಕರು ಜಮಖಂಡಿ , ಬಿ. ಪಿ. ಬಾಗೆನ್ನವರ, ಅಧ್ಯಕ್ಷರು ಜಿ ಪ್ರಾ ಶಾ ಶಿ ಸಂ ಬಾಗಲಕೋಟೆ, ಎ. ಕೆ. ಬಸಣ್ಣವರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಮಖಂಡಿ ಹಾಗೂ ಇನ್ನಿತರ ಮುಖ್ಯ ಅತಿಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಡಿಪಿ ಅರ್ಜಿಗಳೊಂದಿಗೆ ವ್ಯವಹರಿಸುವಾಗ ಕರ್ನಾಟಕ ಸರ್ಕಾರವು ಕೆಲವು ಬಿಯರ್ ಕಂಪನಿಗಳಿಗೆ ಒಲವು ತೋರುತ್ತಿದೆ ಎಂದು ಬಿಎಐ (ಬ್ರೂವರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ) ಆರೋಪ ಮಾಡಿದೆ

# ಅಬಕಾರಿ ನಿಯಮಗಳನ್ನು ಏಕರೂಪವಾಗಿ ಅನ್ವಯಿಸುತ್ತಿಲ್ಲ, ಇದು ಬಿಎಐ ಸದಸ್ಯರ ಹಿತಾಸಕ್ತಿಗೆ ಧಕ್ಕೆ ತರುತ್ತದೆ ಎಂದು ಬಿಎಐ ಡಿಜಿ ವಿನೋದ್ ಗಿರಿ ಹೇಳಿದ್ದಾರೆ

**ಬೆಂಗಳೂರು :** ರಾಜ್ಯದಲ್ಲಿ ಬಿಯರ್ ನಿಯಮಗಳಲ್ಲಿ ಹೆಚ್ಚುತ್ತಿರುವ ಅನಿಯಂತ್ರಿತತೆ ಬಗ್ಗೆ ಗಮನಸೆಳೆದಿರುವ ಬ್ರೂವರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ), ರಾಜ್ಯ ಸರ್ಕಾರವು ಡಿಪಿ(ಡಿಕ್ಲ್ಯಾರ್ಡ್ ಪ್ರೈಸ್)ಗೆ ಸಂಬಂಧಿಸಿದ ಅರ್ಜಿಗಳ ಜೊತೆ ವ್ಯವಹರಿಸುವಾಗ ಕೆಲವು ಕಂಪನಿಗಳಿಗೆ ಅನುಕೂಲ ಮಾಡಿಕೊಡುತ್ತಿದೆ ಎಂದು ಹೇಳಿದೆ.

ಕರ್ನಾಟಕ ಸರ್ಕಾರವು ಡಿಪಿಯನ್ನು (ಡಿಕ್ಲ್ಯಾರ್ಡ್ ಪ್ರೈಸ್) ಹತ್ತಿರದ 5 ರೂ. ಗೆ ರೌಂಡ್ ಆಫ್ ಮಾಡುವ ಪರಿಕಲ್ಪನೆಯನ್ನು ಪರಿಚಯಿಸಿತು, ಆದರೆ ಬೆಲೆ ಪರಿಷ್ಕರಣೆಗೆ ಅರ್ಜಿ ಸಲ್ಲಿಸಿದ ಮೆಸರ್ಸ್ ಸೋಮ್ ಬ್ರೂವರೀಸ್ ಮತ್ತು ಡಿಸ್ಟಿಲರೀಸ್ ಎಂಬ ಬಿಯರ್ ಪೂರೈಕೆದಾರರ ಬೆಲೆ ಏರಿಕೆಗೆ ಸಂಬಂಧಿಸಿ ಸಲ್ಲಿಸಿದ ಅರ್ಜಿಯನ್ನು ಸೂಕ್ತ ದಾಖಲೆ ಪುರಾವೆಗಳಿಲ್ಲದೆ ಅನುಮೋದಿಸಲಾಗಿದೆ, ಆದರೆ ಬಿಎಐ ಸದಸ್ಯರ ಮನವಿಯನ್ನು ತಡೆಹಿಡಿಯಲಾಗಿದೆ. ಭಾರತದ ಅತಿದೊಡ್ಡ ಬಿಯರ್ ತಯಾರಕರಾದ ಎಬಿ ಇನ್ಬೆವ್, ಕಾರ್ಲ್ಸ್‌ಬರ್ಗ್ ಮತ್ತು ಯುನೈಟೆಡ್ ಬ್ರೂವರೀಸ್ (ಹೈನೆಕೆನ್ ಕಂಪನಿ) ಅನ್ನು ಪ್ರತಿನಿಧಿಸುವ ಬಿಯರ್ ಉದ್ಯಮದ ಅತ್ಯುನ್ನತ ಸಂಸ್ಥೆಯಾದ ಬಿಎಐ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ ಈ ರೀತಿ ಹೇಳಿದೆ.

"ಇದರ ಪರಿಣಾಮವಾಗಿ, ರಾಜ್ಯದ ಅತಿದೊಡ್ಡ ಹೂಡಿಕೆದಾರರು ಮತ್ತು ಸರ್ಕಾರದ ಆದಾಯಕ್ಕೆ ಕೊಡುಗೆ ನೀಡುವ ನಮ್ಮ ಸದಸ್ಯ ಕಂಪನಿಗಳು ಬಹಳ ಅಸಮಾಧಾನಗೊಂಡಿವೆ ಮತ್ತು ತಾರತಮ್ಯದ ವಿರುದ್ಧ" ಕರ್ನಾಟಕದ ಎಲ್ಲಾ ಬಿಯರ್ ಪೂರೈಕೆದಾರರಿಗೆ ಸಮಾನ ಅವಕಾಶವನ್ನು ರಾಜ್ಯ ಸರ್ಕಾರ ಒದಗಿಸಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದೆ. ಎಂಆರ್‌ಪಿಯಲ್ಲಿ ಯಾವುದೇ ಬದಲಾವಣೆಯಿಲ್ಲದ ಡಿಪಿಯಲ್ಲಿ ರೌಂಡಿಂಗ್ ಆಫ್ ಗೆ ಸಂಬಂಧಿಸಿದಂತೆ ತನ್ನ ಸದಸ್ಯರ ಅರ್ಜಿಗಳನ್ನು ಸಹ ತೆರವುಗೊಳಿಸಬೇಕೆಂದು ಬಿಎಐ ಒತ್ತಾಯಿಸಿದೆ.

ಅಬಕಾರಿ ನಿಯಮಗಳ ಅನುಷ್ಠಾನದಲ್ಲಿನ ವ್ಯವಹಾರವನ್ನು ಗಮನ ಸೆಳೆದು, "ಇದು ನ್ಯಾಯಯುತ ಸ್ಪರ್ಧೆಯ ನೀತಿಗಳಿಗೆ ವಿರುದ್ಧವಾಗಿದೆ ಮತ್ತು ದೀರ್ಘಾವಧಿಯಲ್ಲಿ ಉದ್ಯಮ, ಸರ್ಕಾರದ ಆದಾಯ, ಗ್ರಾಹಕರು, ಸ್ಥಳೀಯ ಆರ್ಥಿಕತೆ ಮತ್ತು ರಾಜ್ಯದ ಹೂಡಿಕೆಗೆ ಒಳ್ಳೆಯದಕ್ಕಿಂತ ಹೆಚ್ಚು ಹಾನಿ ಮಾಡುತ್ತದೆ" ಎಂದು ತಿಳಿಸಿದೆ.

ಬಿಎಐ ಮಹಾನಿರ್ದೇಶಕ ವಿನೋದ್ ಗಿರಿ ಅವರ ಪ್ರಕಾರ, "ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಬಿಯರ್ ನಿಯಂತ್ರಣದಲ್ಲಿ ಹೆಚ್ಚುತ್ತಿರುವ ನಿರಂಕುಶ ಪ್ರಭಾವವನ್ನು ನಾವು ನೋಡುತ್ತಿದ್ದೇವೆ. ಇದು ಉದ್ಯಮದ ಬೆಳವಣಿಗೆಗೆ ಅಪಾಯಕಾರಿಯಾಗಿರುವುದು ರಾಜ್ಯದಲ್ಲಿ ಇತ್ತೀಚಿನ ಬಿಯರ್ ಮಾರಾಟದ ಪ್ರವೃತ್ತಿಗಳಿಂದ ಸ್ಪಷ್ಟವಾಗಿದೆ. ಬಿಯರ್ ಮೇಲಿನ ತೆರಿಗೆಯನ್ನು ಆಗಾಗ್ಗೆ ಹೆಚ್ಚಿಸುವುದರಿಂದ ಬಿಯರ್ ಹೆಚ್ಚಿನ ಗ್ರಾಹಕರಿಗೆ ತಲುಪುತ್ತಿಲ್ಲ, ಅಲ್ಲದೆ ಲೇಬಲ್ ಗಳಿಗೆ ಸಂಬಂಧಿಸಿದ ಅನಿಯಂತ್ರಿತ ಆದೇಶಗಳು ಕರ್ನಾಟಕದಲ್ಲಿ ಉತ್ಪಾದನೆಗೆ ಹೆಚ್ಚು ತೊಂದರೆಯನ್ನುಂಟುಮಾಡುತ್ತಿದೆ. ಮತ್ತು ಈಗ ನಾವು ಅಬಕಾರಿ ನಿಯಮಗಳನ್ನು ಎಲ್ಲಾ ಪೂರೈಕೆದಾರರಿಗೆ ಏಕರೂಪವಾಗಿ ಅನ್ವಯಿಸದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ, ಇದು ಕೆಲವರಿಗೆ ಅನುಕೂಲಕರವಾಗಿದೆ. ಇಂತಹ ನಿರಂಕುಶತೆ ಮುಂದುವರಿದರೆ, ನಮ್ಮ ಸದಸ್ಯರು ರಾಜ್ಯದಲ್ಲಿ ತಮ್ಮ ಹೂಡಿಕೆಗಳನ್ನು ನಿಲ್ಲಿಸುವ ಸಾಧ್ಯತೆಗಳಿರುತ್ತವೆ " ಎಂದು ಹೇಳಿದರು.

"ರಾಜ್ಯದಲ್ಲಿ ಮಾರಾಟವಾಗುವ ಹೆಚ್ಚಿನ ಬಿಯರ್ ಅನ್ನು ಬಿಎಐ ಸದಸ್ಯರು ಹೊಂದಿದ್ದಾರೆ ಮತ್ತು ರಾಜ್ಯದ ಆದಾಯಕ್ಕೆ ಪ್ರಮುಖ ಕೊಡುಗೆ ನೀಡುತ್ತಾರೆ. ರಾಜ್ಯದಲ್ಲಿ ಸರ್ಕಾರದ ತೆರಿಗೆ ಆದಾಯಕ್ಕೆ ಬಿಯರ್ ಮಾರಾಟ ಹೆಚ್ಚಿನ ಕೊಡುಗೆ ನೀಡುತ್ತದೆ. ಇದು ರಾಜ್ಯದಲ್ಲಿ ಮಾರಾಟವಾಗುವ ಆಲ್ಕೊಹಾಲ್ಯುಕ್ತ ಪಾನೀಯಗಳಲ್ಲಿ ಕೇವಲ 8% ರಷ್ಟಿದೆ ಆದರೆ ಈ ವಲಯದಿಂದ ಗಳಿಸಿದ ತೆರಿಗೆ ಆದಾಯದ 16% ರಷ್ಟಿದೆ. ಇದಲ್ಲದೆ, ಈ ಪಾಲು ಏರುತ್ತಿದೆ; ಇದು ಐದು ವರ್ಷಗಳ ಹಿಂದೆ 11% ಆಗಿತ್ತು ಮತ್ತು ಈಗ 16% ಆಗಿದೆ. ರಾಜ್ಯದಲ್ಲಿ ಸ್ಥಿರವಾದ ನೀತಿ ವಾತಾವರಣದಿಂದ ಇದು ಸಾಧ್ಯವಾಗಿದೆ. ಇದು ಉದ್ಯಮವು ಬೆಳೆಯಲು ಮತ್ತು ಕೊಡುಗೆ ನೀಡಲು ಅನುವು ಮಾಡಿಕೊಟ್ಟಿದೆ. ಆದರೆ ಈಗ ಅಬಕಾರಿ ನಿಯಮಗಳ ಅನುಷ್ಠಾನದಲ್ಲಿ ನಾವು ಸಾಕಷ್ಟು ನಿರಂಕುಶತೆಯನ್ನು ನೋಡುತ್ತಿದ್ದೇವೆ. ರಾಜ್ಯ ಸರ್ಕಾರವು ತಕ್ಷಣ ನಮ್ಮ ಸಮಸ್ಯೆಗಳನ್ನು ಪರಿಹರಿಸಬೇಕು ಮತ್ತು ಎಲ್ಲಾ ಬಿಯರ್ ತಯಾರಕರಿಗೆ ಸಮಾನ ಅವಕಾಶವನ್ನು ಅನುಮತಿಸಬೇಕು" ಎಂದು ಗಿರಿ ಹೇಳಿದರು.

# ನಗರದಲ್ಲಿ ನಿರ್ಗತಿಕ ಹಾಗೂ ವಿಧವಾ ಮಹಿಳೆಯರಿಗೆ ರಂಜಾನ್ ಕಿಟ್ಟುಗಳ ವಿತರಣೆ





**ಹೊಸಪೇಟೆ :** ನಗರದ ಅಂಜುಮನ್ ಶಾದಿ ಮಹಲ್ ನಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ನಿರ್ಗತಿಕ ಹಾಗೂ ವಿಧವಾ ಮಹಿಳೆಯರಿಗೆ ಉಚಿತ ಆಹಾರದ ಕಿಟ್ಟು ಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರು ಎಚ್. ಎನ್ ಮೊಹಮ್ಮದ್ ನಿಯಾಜಿ ಎಮ್.ಎಮ್. ಫೈರೋಜ್ ಖಾನ್, ಅಬೂಬಕ್ಕರ್ ಅಶ್ರಫಿ,ಅನ್ಸರ್ ಭಾಷ,ಡಾ.ದುರ್ವೆಶ್ ಮೈನುದ್ದೀನ್ ಸೇರಿದಂತೆ ಸಮಾಜ ಬಾಂಧವರು ಉಪಸ್ಥಿತರಿದ್ದರು.

# ರಂಜಾನ್ ಉಪವಾಸದಂದು ನಾ ಕಂಡ ಭಾವೈಕ್ಯತೆ ಆಶೀರ್ವಾದ

**ಕೊಪ್ಪಳ :** 103 ಇಳಿ ವಯಸ್ಸಿನ ಕೊಪ್ಪಳ ತಾಲೂಕಿನ ಮೋರನಾಳ್ ಗ್ರಾಮದ ತೊಗಲುಗೊಂಬೆಯಾಟ ಕಲಾವಿದರು ಹಾಗೂ ಪದ್ಮಶ್ರೀ ಪುರಸ್ಕೃತರಾದ ಭೀಮವ್ವ ಶಿಳ್ಳೆಕ್ಯಾತರ್ ಅವರು ಬೆಂಗಳೂರಿನಲ್ಲಿ ನಮ್ಮ ನ್ಯೂಸ್ ಫಸ್ಟ್ ಸುದ್ದಿವಾಹಿನಿ ಆಯೋಜಿಸಿದ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿ ಮುಗಿಸಿಕೊಂಡು ಇಂದು ಬೆಳಿಗ್ಗೆ ಮರಳಿ ಕೊಪ್ಪಳದ ಕೇಂದ್ರೀಯ ಬಸ್ ನಿಲ್ದಾಣಕ್ಕೆ ಬಂದಾಗ, ನನ್ನ ಕಣ್ಣಿಗೆ ಕಂಡಿದ್ದು ಭಾವೈಕ್ಯತೆಯ ಆಶೀರ್ವಾದ....



ಕೊಪ್ಪಳದ ಬ್ಯಾಂಕ್ ಒಂದರ ಸಿಬ್ಬಂದಿ ನೂರ ಭಾಷಾ ಎನ್ನುವವರು ಭೀಮವ್ವ ಅಜ್ಜಿಯನ್ನು ಕಂಡು ಪ್ರೀತಿಯಿಂದ ಗೌರವದಿಂದ ಅವರ ಬಳಿ ಬಂದು ಆಶೀರ್ವಾದ ಪಡೆಯಲು ಮುಂದಾದರು, ನೂರ ಭಾಷ ಅವರ ತಲೆ ಮೇಲೆ ಕೈಯಿಟ್ಟಿ ಮನತುಂಬಿ ಭೀಮವ್ವ ಅಜ್ಜಿ ಅವರು ಆಶೀರ್ವಾದ ನೀಡಿದ ಸನ್ನಿವೇಶ ಭಾವೈಕ್ಯತೆಗೆ ಸಾಕ್ಷಿ ಎಂದರೆ ತಪ್ಪಾಗಲಾರದು.

ಈ ವೇಳೆ ಕಾನಿಪ ನೀಡುವ ದತ್ತಿಪ್ರಶಸ್ತಿ ಪುರಸ್ಕೃತರಾದ ಶಿವರಾಜ್ ನುಗಡೋಣಿ ಅವರು ಸಹ ಇದ್ದರು. ಅದು ರಂಜಾನ್ ಉಪವಾಸ ದಿನದಲ್ಲಿ ಇಂತಹ ಅಪರೂಪದ ಸನ್ನಿವೇಶಗಳು ನಡೆದಾಗ....

ಸಿದ್ಧಾಂತ, ಜಾತಿ-ಧರ್ಮ ಪ್ರತಿಷ್ಠೆ ಎನ್ನುವ ಮೂರ್ಖತ್ವದ ಮಧ್ಯೆ ಒಂದೆರಡು ಒಳ್ಳೆ ಸಾಲು ಬರೆಯದಿದ್ದರೆ.....ಹೇಗೆ

**ರಾಜು. ಬಿ. ಆರ್**

# ಕಾರ್ಖಾನೆ ಮುಚ್ಚಲು ಜಿಲ್ಲಾಡಳಿತಕ್ಕೆ ಮನಸ್ಸಿಲ್ಲ: ಅಲ್ಲಮಪ್ರಭು ಬೆಟ್ಟದೂರು

**ಕೊಪ್ಪಳ :** ಸರಕಾರವೇ ಸಾರ್ವಜನಿಕ ಕೆರೆ ಮಾರಿದ ಬಗ್ಗೆ ಮಾಹಿತಿ ಕೇಳಿದರೆ ಜಿಲ್ಲಾಧಿಕಾರಿ ಅವರು ಮಾಹಿತಿ ನೀಡಲು ಸಮಯ ಇಲ್ಲವೆನ್ನುತ್ತಿದ್ದಾರೆ, ಅದಕ್ಕೆ ಜಿಲ್ಲಾಧಿಕಾರಿಗಳ ತುರ್ತು ವರ್ಗಾವಣೆ ಆಗಬೇಕಿದೆ ಎಂದು ಹೋರಾಟಗಾರ, ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಆಗ್ರಹಿಸಿದರು.

ಅವರು ಈ ಕುರಿತು ಪತ್ರಿಕಾ ಭವನದಲ್ಲಿ ಮಾಧ್ಯಮ ಗೋಷ್ಠಿ ನಡೆಸಿ ಮಾತನಾಡಿದರು. ಅಲ್ಲಿನ ಜನತೆಗೆ ತೀವ್ರ ಸ್ವರೂಪದ ಕಾಯಿಲೆಗಳು ಬಂದಿವೆ, ಕ್ಯಾನ್ಸರ್ ಕಾರಕ ಪರಿಸರ ಹಾನಿ ಆದರೂ ಸಹ ನಮಗೆ ಮಾಹಿತಿ ಇಲ್ಲ. ಪರಿಸರ ಇಲಾಖೆ ಇದೆಯೋ ಇಲ್ವೋ, ಇದ್ದರೆ ಎಲ್ಲಿದೆ, ಅವರು ಸತ್ತು ಹೋಗಿದ್ದಾರಾ? ಎಂದು ಅವರು ಪ್ರಶ್ನಿಸಿದರು.




ಪ್ರಗತಿಪರ ಹೋರಾಟಗಾರ ಕೆ.ಬಿ.ಗೋನಾಳ ಅವರು ಮಾತನಾಡಿ, ಬೇರೆ ತಾಲೂಕಿನ ಜನ ಬಂದು ಇಲ್ಲಿ ಪತ್ರಿಕೆಗಳಿಗೆ ಹೇಳಿಕೆ ಕೊಟ್ಟು ಕಾರ್ಖಾನೆ ಅವರಿಂದ ಏನೋ ಲಾಭ ಪಡೆದುಕೊಳ್ಳಲು ಬರುತ್ತಿದ್ದಾರೆ ಅವರನ್ನು ನಿರ್ಲಕ್ಷ್ಯ ಮಾಡಬೇಕು, ಅವರು ಎಂದೂ ಜನರಪರ ಹೋರಾಟ ಮಾಡಿದವರಲ್ಲ ಎಂಬುದನ್ನು ಈ ಮೂಲಕ ತಿಳಿಯಪಡಿಸುತ್ತೇವೆ ಎಂದರು.

ಹೋರಾಟ ನಿರಂತರವಾಗಿರುತ್ತದೆ, ಕಂಪನಿಯವರು ಜನರಿಗೆ ಮಂಕು ಬೂದಿ ಎರಚುತ್ತಿದ್ದಾರೆ, ಕಾರ್ಖಾನೆ ಮಾಲಿಕರೇ ಕೆಲವು ಸಂಘಟನೆಗಳಿಗೆ ಚೂ ಬಿಡುವ ಕೆಲಸ ಮಾಡುತ್ತಿದ್ದಾರೆ. ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನದ ಮೂಲಕ ಜನಪ್ರತಿನಿಧಿಗಳಿಗೆ ಒತ್ತಾಯ ಮಾಡುತ್ತೇವೆ, ಕಾರ್ಖಾನೆ ಬಂದು ಮಾಡಿಸಿ ಇಲ್ಲವೇ ರಾಜೀನಾಮೆ ಕೊಡಿ ಎಂಬುದು. ಸರಕಾರ ಅಣು ಸ್ಥಾವರದ ಕುರಿತು ಮಾತನಾಡುತ್ತಿಲ್ಲ, ನಮಗೆ ಅದಕ್ಕಾಗಿ ಇನ್ನೊಂದು ಹೋರಾಟ ಮಾಡಲು ಆಗಲ್ಲ. ಆದ್ದರಿಂದ ಆ ವಿಷಯ ಕೂಡ ಚರ್ಚೆ ಆಗಬೇಕು. ಸರಕಾರಿ ಕೆರೆ ಸಾರ್ವಜನಿಕ ಬಳಕೆಗೆ ಮುಕ್ತವಾಗಬೇಕು, ಅದಕ್ಕೆ ಕಟ್ಟಿರುವ ಗೋಡೆ ತಗಿಬೇಕು. ಅಲ್ಲಿನ ಬಾದಿತ ಜನರ ಆರೋಗ್ಯ ಸಮೀಕ್ಷೆ ಮಾಡಿ ಅವರಿಗೆ ಸರಕಾರಿ ವೆಚ್ಚದಲ್ಲಿ ಚಿಕಿತ್ಸೆ ನೀಡಬೇಕು ಎಂದು ಮುಖಂಡರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಚಾವೋ ಆಂದೋಲನ ಸಮಿತಿಯ ಜ್ಯೋತಿ ಎಂ. ಗೊಂಡಬಾಳ, ನಜೀರಸಾಬ್ ಮೂಲಿಮನಿ, ಮಹಾಂತೇಶ ಕೊತಬಾಳ, ಶರಣು ಗಡ್ಡಿ, ಮಂಜುನಾಥ ಜಿ. ಗೊಂಡಬಾಳ, ಕಾಶಪ್ಪ ಚಲವಾದಿ, ಮುದಕಪ್ಪ ಹೊಸಮನಿ ಇತರರು ಇದ್ದರು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ




**ವಿಜಯಪುರ :** ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಜಿಲ್ಲಾ ಪಂಚಾಯತಿ ಹಾಗೂ ಸಾರವಾಡ ಗ್ರಾಮ ಪಂಚಾಯತ ಇವರ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಪ್ರೌಢಶಾಲೆ ಕಣಮುಚನಾಳ, ರಾಷ್ಟ್ರೀಸಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಆಚರಣೆ ಮಾಡಲಾಯಿತು.

ಜಿಲ್ಲಾ ಪಂಚಾಯತಿಯ ಎನ್ ಆರ್ ಡಿ ಎಮ್ ಎಸ್ ಕೇಂದ್ರದ ಯೋಜನಾ ಸಂಯೋಜಕರ ಅಧಿಕಾರಿ ವಿದ್ಯಾಧರ ಅವರು ಮಾತನಾಡಿ, ಭೌತಶಾಸ್ತ್ರಜ್ಞ ಸರ್ ಸಿ.ವಿ. ರಾಮನ್ ಅವರು ರಾಮನ್ ಪರಿಣಾಮದ ಆವಿಷ್ಕಾರವನ್ನು ಸ್ಮರಣೆಯ ನಿಮಿತ್ಯ ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ? ಆಚರಣೆ ಮಾಡಲಾಗುತ್ತಿದೆ, ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯದಲ್ಲಿ ಆಸಕ್ತಿ ಮತ್ತು ಪ್ರಸ್ತುತ ತಂತ್ರಜ್ಞಾನವು ಹೇಗೆ ಬದಲಾವಣೆ ಹೊಂದುತ್ತಿದೆ, ಎಂಬುದನ್ನ ವಿಜ್ಞಾನ ತಂತ್ರಜ್ಞಾನ ಮಂಡಳಿಯು ಅರಿವು ಮೂಡಿಸಲಾಗುತ್ತಿದ್ದು ಮಕ್ಕಳಿಗೆ ಉಪನ್ಯಾಸ, ಚರ್ಚಾ ಸ್ಪರ್ಧೆಗಳು, ರಸ ಪ್ರಶ್ನೆ, ವಸ್ತು ಪ್ರದರ್ಶನ ಹೀಗೆ ಅನೇಕ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದ ವಿಜ್ಞಾನ ತಂತ್ರಜ್ಞಾನದ ನೂತನವಾದ ಆವಿಷ್ಕಾರಗಳು ತಿಳುವಳಿಕೆಯಿಂದ ಮಕ್ಕಳಿಗೆ ಸದುಪಯೋಗವಾಗಲಿದೆ ಎಂದು ತಿಳಿಸಿದರು.

ಲಕ್ಷಣಗೌಡ ಬಿರಾದಾರ ಎಸ್.ಡಿ.ಎಮ್,ಸಿ ಅಧ್ಯಕ್ಷ ಆರ್ ವಿ ಹೊಸುರ ಮುಖ್ಯೋಪಾಧ್ಯಾಯರು, ಶಿಕ್ಷಣ ಪ್ರೇಮಿ ಮಹಾದೇವಪ್ಪ ಮಮದಾಪೂರ, ಬೀಮಪ್ಪ ಪತ್ತಾರ, ಶಿಕ್ಷಕರಾದ ಉಷಾರಾಣಿ, ಸುಮಲತಾ ನಂದಿಮಠ, ಕಾರ್ಯದರ್ಶಿ ರಮೇಶ ಗೌಡಪ್ಪಗೋಳ ಇದ್ದರು.

## ಲಿಡಕರ್ ಮಾರಾಟ ಮಳಿಗೆಯಲ್ಲಿ ರಿಯಾಯಿತಿ ಮಾರಾಟ ಮಾ, 3 ರಿಂದ 25 ರವರೆಗೆ

**ಬೆಳಗಾವಿ :** ನಗರದ ಲಿಡಕರ್ ಮಾರಾಟ ಮಳಿಗೆಯಲ್ಲಿ ದಿನಾಂಕ: 3-3-2025 ರಿಂದ 25-3-2025ರ ವರೆಗೆ ಪ್ರಧಾನ ಕಛೇರಿಯ ಆದೇಶದಂತೆ ಮಳಿಗೆಯಲ್ಲಿ ಆರ್ಥಿಕ ತೀರುವಳಿ ಪ್ರಯುಕ್ತ ಗ್ರಾಹಕರು ಖರೀದಿಸಿದ ಎಲ್ಲಾ ದಾಸ್ತಾನುಗಳ
ಮೇಲೆ ಶೇಕಡಾ 20ರಷ್ಟು ರಿಯಾಯಿತಿ ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ.

ಮಳಿಗೆಯಲ್ಲಿ ಅಪ್ಪಟ ಚರ್ಮದ ಗುಣಮಟ್ಟ ಹೊಂದಿದ ಪಾದರಕ್ಷೆಗಳು, ವೆನಿಟಿ ಬ್ಯಾಗ್, ಪರ್ಸ, ಬೂಟು, ಬೆಲ್ಟ, ಕಾರ್ಡ ಹೋಲ್ಡರ್, ಹಾಗೂ ಟ್ರಾವೆಲ್ ಬ್ಯಾಗ್, ಎಕ್ಸಿಕ್ಯೂಟಿವ್ ಬ್ಯಾಗ್, ಕೀ ಚೈನ್, ವೇಸ್ಟ ಪೋಚ್ ಮತ್ತು ಮುಂತಾದ ವಸ್ತುಗಳು ರಿಯಾಯಿತಿ ದರದಲ್ಲಿ ಸಿಗುತ್ತವೆ ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಲಿಡಕರ್ ಮಾರಾಟ ಮಳಿಗೆಯ ವ್ಯವಸ್ಥಾಪಕರಾದ ಎ.ಎಸ್.ರುದ್ರೇಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿವಸಿಂಪಿ ಸಮಾಜಕ್ಕೆ 1,11,000 ರೂ. ದೇಣಿಗೆ ನೀಡಿದ ಪ್ರಭು ರೇಶ್ಮಿ ದಂಪತಿಗಳು

**ಬೈಲಹೊಂಗಲ :** ತಾಲೂಕ ಲಿಂಗಾಯತ ಶಿವಶಿಂಪಿ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಗಣ್ಯರಾದ ಪ್ರಭು ರೇಶ್ಮಿ ದಂಪತಿಗಳು ರೂ. 1,11,000 ರೂಗಳನ್ನು ದೇಣಿಗೆ ನೀಡಿದರು.

ರವಿವಾರ ನಡೆದ ಶಿವಸಿಂಪಿ ಸಮಾಜದ ಕುಲ ಗುರುಗಳಾದ ಶಿವಶರಣ ಶಿವದಾಸಿಮಯ್ಯನವರ ಜಯಂತಿ ಉತ್ಸವ ಕಾರ್ಯಕ್ರಮದಲ್ಲಿ ವಾಗ್ದಾನ ಮಾಡಿದ ಪ್ರಭು ರೇಶ್ಮಿ ಹಾಗೂ ಸಂಗೀತಾ ರೇಶ್ಮಿ ಅವರು ಸಾಯಂಕಾಲ ತಮ್ಮ ನಿವಾಸದಲ್ಲಿ



ಸಮಾಜದ ಗಣ್ಯರನ್ನು ಕರೆಸಿ ರೂ. 1,11,000 ರೂ. ಗಳನ್ನು ದೇಣಿಗೆ ನೀಡಿದರು.

ಸಮಾಜದ ಅಧ್ಯಕ್ಷ ದೊಡ್ವೀರಪ್ಪ ಕಾದ್ರೊಳ್ಳಿ ಗೌರವಾಧ್ಯಕ್ಷ ರುದ್ರಪ್ಪ ಕಾದ್ರೊಳ್ಳಿ ಉಪಾಧ್ಯಕ್ಷ ಕಿರಣ ಪಾಟೀಲ, ಕಾರ್ಯದರ್ಶಿ ಮಹಾಂತೇಶ ರೇಶ್ಮಿ, ಕಾರ್ಯಕರ್ತರಾದ ಜಗದೀಶ್ ಲೋಕಾಪುರ, ಬಸವರಾಜ ಕರಜಗಿ, ವಿರುಪಾಕ್ಷಿ ಕಾದ್ರೊಳ್ಳಿ, ಸಮಾಜದ ಹಿರಿಯರಾದ ಶೇಖರಣ್ಣ ಮ. ರೇಶ್ಮಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶರಣರ ಚಿಂತನೆಯಿಂದ ನೆಮ್ಮದಿಯ ಜೀವನ

**ತಾಳಿಕೋಟೆ :** ಎಲ್ಲರನ್ನು ಸಮಾನಾಗಿ ಕಾಣುವದಲ್ಲದೇ ಸನ್ಮಾರ್ಗದಲ್ಲಿ ಕೊಂಡೊಯುವಂತಹ ಕಾರ್ಯ ಮಾಡಿದ ಶರಣರ ಧರ್ಮ ಶರಣ ಧರ್ಮವಾಗಿದೆ ಎಂದು ಖ್ಯಾತ ಪುರಾಣ ಪ್ರವಚನಕಾರರಾದ ಶರಣಸೋಮನಾಳದ ಶ್ರೀ ಮಹಾದೇವಯ್ಯ ಶಾಸ್ತ್ರೀಗಳು ನುಡಿದರು.

ಸೋಮವಾರರಂದು ಶ್ರೀ ಶರಣಮುತ್ಯಾರವರ ಜಾತ್ರೋತ್ಸವ ನಿಮಿತ್ಯವಾಗಿ ಶ್ರೀಮಠದ ಪ್ರಾಂಗಣದಲ್ಲಿ ಏರ್ಪಡಿಸಲಾದ ಶ್ರೀ ಪವಾಡ ಬಸವೇಶ್ವರರವರ ಮಹಾ ಪುರಾಣದ 3ನೇ ದಿನದಂದು ಮಾತನಾಡುತ್ತಿದ್ದ ಅವರು ಹಿಂದಿನ ಕಾಲದ ಶರಣ ಶರಣೆಯರು ರಚಿಸಿದಂತಹ ವಚನಗಳ ಮೂಲಕ ಸಾಮಾಜಿಕ ಸಮಾನತೆ ಎಂಬುದು ಹೊರಹೊಮ್ಮಲು ಕಾರಣವಾಗಿದೆ ಕಾರಣ ಶರಣ ತತ್ವಗಳು ಚಿಂತನೆಗಳೆಂಬವುಗಳು ಸರ್ವಕಾಲಿಕವಾಗಿವೆ ಎಂದರು. ದೇಹವೆಂಬುದು ಗಾಳಿಬಿಟ್ಟ ದೀಪದಂತಿದೆ ಅಭದ್ರ ಸಂಸಾರ ಮಾಡಿ ಜೀವನ ಹಾಳು ಗೆಡುವದೇ ಆಗಿದೆ ಕಾರಣ ಸುಭದ್ರ ಸಂಸಾರ ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂದರು. ಬಸವನ ಬಾಗೇವಾಡಿಯ ನಿಡಗುಂದಿ ಪಟ್ಟಣದಲ್ಲಿ ಗುರಲಿಂಗಪ್ಪ ಮಲ್ಲಮ್ಮ ಈ ಶರಣ ಶರಣೆಯ ದಂಪತಿಗಳು ಸಂಸಾರ ಮಾಡಿಕೊಂಡು ಸದ್ಗತಿಯ ಬಧುಕನ್ನು ರೂಪಿಸಿಕೊಂಡವರಾಗಿದ್ದರು ವಚನ ವಿಚಾರಗಳನ್ನು ಕೇಳಿಯೇ ಹಿಂದಿನ ಕಾಲದಲ್ಲಿ ವಿಚಾರಗಳನ್ನು ಅರೀತುಕೊಳ್ಳಲಾಗುತ್ತಿತ್ತೆಂದು ದೇವರ ದಾಸಿಮಯ್ಯನವರ ಹಾಗೂ ಸುಕಲಾದೇವಿ ಅವರ ದಾಂಪತ್ಯ ಜೀವನ ಕುರಿತು ವಿವರಿಸಿದ ಶ್ರೀಗಳು ಬಧುಕಿನಲ್ಲಿ ಎಲ್ಲವನ್ನು ತೆಗೆದುಕೊಂಡು ಹೋಗುವದಿಲ್ಲಾ ಎಲ್ಲವನ್ನು ಇಲ್ಲಿಯೇ ಬಿಟ್ಟು ಹೋಗುತ್ತೇವೆಂದರು. ಸಮಾಜಕ್ಕೆ ದಾರೀ ದೀಪವಾಗಿದ್ದ ಗುರಲಿಂಗಪ್ಪ ಮಲ್ಲಮ್ಮ ದಂಪತಿಗಳು ಸಂಸಾರಿಕರಾದ



ಈ ದಂಪತಿಗಳ ಬಧುಕು ಆದರ್ಶಪ್ರೀಯವಾಗಿತ್ತೆಂದರು. ಪತ್ನಿ ಮಲ್ಲಮ್ಮ ಮಕ್ಕಳಿಲ್ಲದಕ್ಕೆ ದುಃಖಭರಿತಳಾದಾಗ ಪತಿ ಗುರಲಿಂಗ ಪತ್ನಿಯನ್ನು ಸಂತೈಸಿ ಭಕ್ತಿಭಾವದಿಂದ ನಡೆದರೆ ಬಸವಣ್ಣನವರಂತಹ ಮಗ ಜನ್ಮ ತಾಳುತ್ತಾನೆಂದು ಪತ್ನಿಗೆ ಗುರುಲಿಂಗಪ್ಪನವರು ಹೇಳಿದ ಮಾತಿನ ಆಲಿಸಿದ ಪತ್ನಿ ಮಲ್ಲಮ್ಮಳು ಪತಿಯ ಮಾತನ್ನು ಆಲಿಸಿ ದಿನನಿತ್ಯ ಮನೆಯ ಮುಂದಿನ ಪತ್ರಿಗಿಡಕ್ಕೆ ಪೂಜೆಗೈಯಲು ಪ್ರಾರಂಬಿಸುತ್ತಾಳೆ ಬಸವಣ್ಣನ ಪೂಜೆ ಗೈದು ಬಸವಾ ನೀನೇ ನನ್ನ ಗರ್ಭದಲ್ಲಿ ಬರಬೇಕೆಂದು ಅಪೇಕ್ಷಿಸಿದ ಮಲ್ಲಮ್ಮಳ ಭಕ್ತಿಭಾವದಂತೆ ಆಕೆಯ ದಿನದ 3ಹೊತ್ತಿನ ಪೂಜೆಯನ್ನು ಹಾಗೂ ಭಕ್ತಿಯನ್ನು ಕಂಡ ಭಗವಂತ ಆಕೆಯ ಸ್ವಪ್ನದಲ್ಲಿ ಬಂದು ನಿನ್ನ ಉದರದಲ್ಲಿ ಬಸವಣ್ಣನೇ ಹುಟ್ಟಿ ಬರುತ್ತಾನೆಂದು ಹೇಳಿದಂತೆ ಮಲ್ಲಮ್ಮಳಿಗೆ ಪುತ್ರ ಸಂತಾನವಾಗುತ್ತದೆ ಆ ಪುತ್ರನೇ ಪವಾಡ ಬಸವೇಶ್ವರರಾಗಿ ಭಕ್ತೋದ್ದಾರಕ್ಕೆ ಮುಂದಾಗುತ್ತಾರೆಂದು ಹೇಳಿದ ಶಾಸ್ತ್ರೀಗಳು ಪ್ರೀತಿ ವಿಸ್ವಾಸವಿದ್ದಲ್ಲಿ ಲಕ್ಷಿ ?ಮೇ ಇರುತ್ತಾಳೆಂದು ಕಥೆಯೊಂದನ್ನು ಹೇಳಿದ ಶ್ರೀಗಳು ಭಕ್ತಿ ಭಾವದಿಂದ ಪರಮಾತ್ಮನ ದ್ಯಾನಮಾಡಿದರೆ ಮಹಾತ್ಮರಂತವರು ಜನ್ಮತಾಳುತ್ತಾರೆಂದು ಅನೇಕ ಮಹಾತ್ಮರು ಜನ್ಮತಾಳಿದ್ದರ ಕುರಿತು ಕೆಲವು ಚಿಕ್ಕ ಕಥೆಗಳ ಮೂಲಕ ನೆರೆದ ಭಕ್ತ ಸಮೂಹಕ್ಕೆ ಪುರಾಣಿಕರು ಮನವರಿಕೆ ಮಾಡುವದರೊಂದಿಗೆ ಶ್ರೀ ಸಾಂಭಪ್ರಭು ಶರಣಮುತ್ಯಾರವರ ಹಾಗೂ ಶ್ರೀ ಖಾಸ್ಗತರ ಕೆಲವು ಹಿಂದೆ ನಡೆದಂತಹ ಪವಾಡ ದೃಶ್ಯಗಳಂತಹ ಘಟನೆಗಳ ಕುರಿತು ವಿವರಿಸಿದರು.

ಈ ಸಮಯದಲ್ಲಿ ಶ್ರೀ ಶರಣರ ಮಠದ ಬಸಣ್ಣ ಶರಣಮುತ್ಯಾರವರು, ಶರಣಪ್ಪಮುತ್ಯಾರವರು, ಆನಂದ ಶರಣರು, ಸಂಗಮೇಶ ಶರಣರು, ಕಾಶಿರಾಯ ದೇಸಾಯಿ, ಗುರುಮೂರ್ತಿಹಿರೇಮಠ,ಮಹಾದೇವಿಹಾವಿನಾಳ,ಮಲ್ಲಣ್ಣ ಶರಣರು, ಭೀಮಣ್ಣ ಇಂಗಳಗಿ, ಗುರು ಶರಣರು, ಸೋಹಿಲ್ ಮುರಾಳ, ಮೊದಲಾದವರು ಉಪಸ್ಥಿತರಿದ್ದರು. ಸಂಗೀತ ಸೇವೆಯನ್ನು ರಾಜು ಗುಬ್ಬೇವಾಡ, ಬಸನಗೌಡ ಬಿರಾದಾರ ಅವರು ನಡೆಸಿಕೊಟ್ಟರು. ಶರಣಗೌಡ ಪೊಲೀಸ್‌ಪಾಟೀಲ ಸ್ವಾಗತಿಸಿದರು. ಈರಣ್ಣ ಶರಣರ ನಿರೂಪಿಸಿ ವಂದಿಸಿದರು.

# ಸನಾತನ ಧರ್ಮದ ಜ್ಞಾನ ನಿಧಿ ಕುರಿತು ಪಾಶ್ಚಾತ್ಯರಿಂದ ಸಂಶೋಧನೆ: ಡಾ. ಕಂಠಪಲ್ಲಿ ಸಮೀರಣ ಆಚಾರ್ಯ

**ವಿಜಯಪುರ :** ನಮ್ಮ ದೇಶದ ಸನಾತನ ಧರ್ಮದ ಜ್ಞಾನ ನಿಧಿ ಕುರಿತು ಪಾಶ್ಚಾತ್ಯರು ಸಂಶೋಧನೆ ನಡೆಸುತ್ತಲಿರುವರು ಎಂದು ಹುಬ್ಬಳ್ಳಿಯ ಪ್ರವಚನ ಭಾರತಿ ಡಾ. ಕಂಠಪಲ್ಲಿ ಸಮೀರಣ ಆಚಾರ್ಯ ಹೇಳಿದರು.

ಇಲ್ಲಿಯ ಬಾಗಲಕೋಟೆ ರಸ್ತೆಯಲ್ಲಿನ ನವರಸಪುರ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀ ಸುಬುಧೇಂದ್ರತೀರ್ಥ ಶೀಪಾದಂಗಳವರ ಆಜ್ಞಾನುಸಾರ ಫೆ. 28ರಿಂದ ಆರಂಭಗೊಂಡ ಶ್ರೀಮದ್ಭಾ ಗವತ ಪ್ರವಚನ ಸಪ್ತಾಹದ ಮೂರನೇದಿನದಂದು ಮಾತನಾಡುತ್ತಿದ್ದರು. ಜ್ಞಾನದಿಂದ ವ್ಯಕ್ತಿತ್ವ ಬೆಳೆಸಿಕೊಳ್ಳುವಂತೆ ಕರೆ ನೀಡಿದ ಅವರು, ದೇಶದ ಜ್ಞಾನ ಧರ್ಮ ಸನಾತನ ಧರ್ಮವನ್ನು ಕಾಪಾಡುತ್ತದೆ. ಸನಾತನ ಧರ್ಮಕ್ಕೆ ಮೂಲ ವಿದ್ಯೆಯಾಗಿದೆ ಎಂದ ಅವರು, ನಿರಂತರ ಭಗವಂತನ ಸ್ಮರಣೆಯಿಂದ ಅಂತಿಮವಾಗಿ ಫಲ ದೊರೆಯುತ್ತದೆ ಎಂದರು.



ತಾಯಿಯ ಋಣ ಬಹು ದೊಡ್ಡದು, ಅದು ಎಂತಹ ಯಜ್ಞಕ್ಕಿಂತ ಮಿಗಿಲಾದುದು. ಅದನ್ನು ತೀರಿಸುವದು ಅಸಾಧ್ಯದ ಮಾತು ಎಂದು ಹೇಳಿದ ಅವರು, ಕಾಗೆ ಎಂದಿಗೂ ಅಪವಿತ್ರ ಪಕ್ಷಿಯಲ್ಲ, ರಾಮಾಯಣದಲ್ಲಿ ಕಾಗೆಯ ಕುರಿತಾಗಿಯೇ ಒಂದು ಅಧ್ಯಾಯವನ್ನು ಮೀಸಲಾಗಿರಿಸಿದೆ ಎಂದರು.

ಶ್ರೀಮದಾಚಾರ್ಯರ ತತ್ವದ ಪ್ರಮುಖ ಅಂಶವೆಂದರೆ ವಿಷ್ಣು ಸ್ಮರಣೆಯಾಗಿದೆ ಎಂದು ನುಡಿದ ಅವರು, ನಿಷ್ಕಲ್ಮಷ ಭಕ್ತಿಯಿಂದ ದೇವರ ಪೂಜೆ ಮಾಡಿದರೆ ಭಗವಂತ ನಿಶ್ಚಿತವಾಗಿಯೂ ಒಲಿಯುತ್ತಾನೆ ಎಂದರು.

ವೇಷ ಭೂಷಣಗಳಿಂದ ಯಾವುದೇ ವ್ಯಕ್ತಿಯನ್ನು ಗುರುತಿಸಬಾರದು. ವಿದ್ಯೆ ಪ್ರತಿ ವ್ಯಕ್ತಿಗೆ ಟಾನಿಕ್ ಇದ್ದಂತೆ. ಕಪಿಲ ಸುಳಾದಿ ಪಠಣ ಮಾಡುವದರಿಂದ ಗ್ರಹಣ ಶಕ್ತಿ ವೃದ್ಧಿಯಾಗುತ್ತದೆ ಎಂದರು.

ವಿಮಾನದ ನಿರ್ಮಾಣಕ್ಕೆ ಮೂಲ ಪ್ರೇರಣೆಯೇ ಭಾಗವತ ಎಂದು ಹೇಳಿದ ಅವರು, ಭಾಗವತದಲ್ಲಿ ವಿಮಾನದ ಉಲ್ಲೇಖವಿದೆ ಅಲ್ಲದೇ ರಾಮಾಯಣದಲ್ಲಿ ಪುಷ್ಪಕ ವಿಮಾನ ಕುರಿತು ವಿವರಿಸಲಾಗಿದೆ ಎಂದು ಹೇಳಿದರು.

ಪ್ರವಚನ ಸಪ್ತಾಹದ ಸೇವೆಗೈದ ಹುಬ್ಬಳ್ಳಿಯ ಆನಂದರಾವ ನಾಯಕ ಹಾಗೂ ಕುಟುಂಬದವರು ಸೇರಿದಂತೆ ಪಂಡಿತ ಮಧ್ವೇಶಾ ಚಾರ್ಯ ಮುತ್ತಗಿ, ಶ್ರೀಮಠದ ಅರ್ಚಕರವಿಆಚಾರ್ಯ,ಶ್ರೀಧರಾಚಾರ್ಯ, ದಾಮೋದರಾಚಾರ್ಯ, ಪ್ರಾಣೇಶ ಪಾಟೀಲ, ವ್ಯಾಸಾಚಾರ್ಯ ಕಟ್ಟಿ, ವಾಮನರಾವ ದೇಶಪಾಂಡೆ(ಬೀಳಗಿ) ಮೊದಲಾದವರು ಉಪಸ್ಥಿತರಿದ್ದರು.

# ಮಹಿಳಾ ದಿನಾಚರಣೆ ಅಂಗವಾಗಿ ಉಪನ್ಯಾಸ

**ಜಮಖಂಡಿ :** ಫೆಬ್ರುವರಿ 4 ರಂದು ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ, ಸಾಂಸ್ಕೃತಿಕ ಘಟಕ, ಮಹಿಳಾ ಸಬಲೀಕರಣ ಹಾಗೂ ಐ.ಕ್ಯೂ.ಎ.ಸಿ. ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ 'ಮಹಿಳಾ ಅಭಿವೃದ್ಧಿ ಕಾರ್ಯಕ್ರಮ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.



ಸಂಪನ್ಮೂಲ ವ್ಯಕ್ತಿಗಳಾಗಿ ಶಿಶು ಅಭಿವೃದ್ಧಿ ಇಲಾಖೆ ಹಿರಿಯ ಮೇಲ್ವಿಚಾರಕಿ ಶ್ರೀಮತಿ ಸುಭದ್ರಾ ಮಹಾಜನ ಇವರು, ಮಹಿಳೆಯರು ಸಮಾಜದ ಅವಿಭಾಜ್ಯ ಅಂಗವಾಗಿದ್ದು, ಅವರ ಅಭಿವೃದ್ಧಿ ರಾಷ್ಟ್ರದ ಪ್ರಗತಿಗೆ ಸಹಾಯಕವಾಗುತ್ತದೆ. ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ, ಅಸಮಾನತೆ ಮುಂತಾದವುಗಳನ್ನು ಹೋಗಲಾಡಿಸುವುದರ ಸಲುವಾಗಿ ಮಹಿಳೆಯರನ್ನು ಸಮಾಜಮುಖಿಯಾಗಿ ಬೆಳೆಸುವ ದಿಶೆಯಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಹಲವಾರು ವಿಶೇಷ ಯೋಜನೆಗಳನ್ನು ಜಾರಿಗೆ ತಂದಿವೆ. ಅದರಲ್ಲೂ ಪ್ರಮುಖವಾಗಿ ಮಕ್ಕಳಿಗಾಗಿ ರೂಪಿಸಿದ (1) ಅಂಗನವಾಡಿ ಕೇಂದ್ರಗಳು ಇಂದು ಯಶಸ್ವಿಯಾಗಿವೆ. ಅಂಗನವಾಡಿ 1975 ಅಕ್ಟೋಬರ್ 2 ರಂದು ಕರ್ನಾಟಕದ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿ ನೂರು ಅಂಗನವಾಡಿಗಳೊಂದಿಗೆ ಪ್ರಾರಂಭಗೊಂಡು ಇಂದು ರಾಷ್ಟ್ರವ್ಯಾಂತ ಕಾರ್ಯವನ್ನು ನಿರ್ವಹಿಸುತ್ತಿವೆ. ಮಗು ಗರ್ಭದಲ್ಲಿರುವಾಗಲೇ ಆರೈಕೆ ಪ್ರಾರಂಭಗೊಂಡು ಮಗು ಜನಿಸಿದ ನಂತರ ಮಗು ಮತ್ತು ತಾಯಿಯ ಆರೋಗ್ಯವನ್ನು ಕೂಡ ರಕ್ಷಣೆ ಮಾಡುತ್ತವೆ. (2) ಭಾಗ್ಯಲಕ್ಷ್ಮೀ ಯೋಜನೆ ವಿಶೇಷವಾಗಿ ಬಡ ಕುಟುಂಬಗಳ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ರೂಪಿಸಲಾದ ಕಾರ್ಯಕ್ರಮವಾಗಿದೆ. ಇದು ಅವರ ಶಿಕ್ಷಣವನ್ನು ಉತ್ತೇಜಿಸುತ್ತದೆ. (3) ಸಖಿ ಯೋಜನೆ ಮಹಿಳಾ ಸಹಾಯ ಕೇಂದ್ರಗಳ ಮೂಲಕ ಮಹಿಳಾ ಸುರಕ್ಷತೆ ಮತ್ತು ಸಮಾನತೆಯನ್ನು ಖಚಿತಪಡಿಸಲು ಉದ್ದೇಶಿಸಲಾಗಿದೆ. (4) ಅಂಗನವಾಡಿ ಕಾರ್ಯಕರ್ತೆಯರಿಗೆ ಎನ್.ಪಿ.ಎಸ್. (ನ್ಯಾಷನಲ್ ಪೆನ್ಷನ್ ಸ್ಕೀಮ್) ಯೋಜನೆ ಮಹಿಳೆಯರ ಆರ್ಥಿಕ ಭದ್ರತೆಗಾಗಿ ದೀರ್ಘಕಾಲಿಕ ವಿತ್ತೀಯ ಸಹಾಯ ನೀಡುವ ಪ್ರಮುಖ ಯೋಜನೆಯಾಗಿದೆ. (5) ಬಾಲ್ಯ ವಿವಾಹ ನಿಷೇಧ ಕಾರ್ಯಕ್ರಮಗಳು – ಹೆಣ್ಣುಮಕ್ಕಳ ಪ್ರಾಥಮಿಕ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಗೆ ಒತ್ತುನೀಡುವುದರೊಂದಿಗೆಅವರಭವಿಷ್ಯವನ್ನು ಸುರಕ್ಷಿತಗೊಳಿಸಲು ಪ್ರಯತ್ನಿಸುತ್ತವೆ. (6) ಮಾತೃ ವಂದನಾ ಯೋಜನೆ – ಮೊದಲನೆ ಮಗು ಹೆಣ್ಣು ಜನಿಸಿದರೆ ರೂ. 5000/–ಹಾಗೂ ಎರಡನೇ ಮಗು ಹೆಣ್ಣು ಜನಿಸಿದರೆ ರೂ. 6000/– ಆರ್ಥಿಕ ಸಹಾಯ ನೀಡುತ್ತಿದೆ. (7) ಉದ್ಯೋಗಿನಿ ಯೋಜನೆ – ಸ್ವಯಂ ಉದ್ಯೋಗಕ್ಕಾಗಿ ಸಬ್ಸಿಡಿ ರೂಪದಲ್ಲಿ ರೂ. ಮೂರು ಲಕ್ಷ ಸಾಲವನ್ನು ನೀಡಲಾಗುತ್ತದೆ. (8) ಗೃಹಲಕ್ಷ್ಮೀ ಯೋಜನೆ ಮಹಿಳೆಯರಿಗೆ ನೇರ ಹಣಕಾಸು ಸಹಾಯ ನೀಡುವ ಮೂಲಕ ಕುಟುಂಬದ ಆರ್ಥಿಕ ಸ್ಥಿತಿಯನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಈ ಎಲ್ಲಾ ಯೋಜನೆಗಳು ಮಹಿಳೆಯರ ಸಬಲೀಕರಣ ಮತ್ತು ಸಮಗ್ರ ಅಭಿವೃದ್ಧಿಗೆ ಮಾರ್ಗಸೂಚಿಯಾಗಿವೆ ಎಂದು ಹೇಳಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರು ತಮ್ಮ ನುಡಿಗಳಲ್ಲಿ ಮಹಿಳೆಯರು ಸಮಾಜದ ಮೂಲ ಸ್ತಂಭವಾಗಿದ್ದು, ಅವರ ಅಭಿವೃದ್ಧಿಯು ರಾಷ್ಟ್ರದ ಸರ್ವಾಂಗೀಣ ಪ್ರಗತಿಗೆ ಅವಶ್ಯಕವಾಗಿದೆ. ಮಹಿಳೆಯರು ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಬೆಳೆದು ಬರಲು ಹಲವಾರು ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಈ ಅಡೆತಡೆಗಳನ್ನು ನಿವಾರಿಸಲು ಸರ್ಕಾರವು ಹಲವಾರು ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಶಿಕ್ಷಣ ಮಹಿಳಾ ಅಭಿವೃದ್ಧಿಯ ಪ್ರಮುಖ ಹಂತವಾಗಿದೆ. "ಬೇಟಿ ಬಚಾವೋ ಬೇಟಿ ಪಢಾವೋ" ಯೋಜನೆ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಉತ್ತೇಜಿಸುವ ಮಹತ್ವದ ಕಾರ್ಯಕ್ರಮವಾಗಿದೆ. ಈ ಯೋಜನೆ ಮಹಿಳಾ ಭ್ರೂಣ ಹತ್ಯೆ ಕಡಿಮೆಯಾಗಲು, ಹೆಣ್ಣುಮಕ್ಕಳಿಗೆ ಸಮಾನ ಅವಕಾಶಗಳು ಲಭ್ಯವಾಗಲು ಸಹಾಯ ಮಾಡುತ್ತದೆ. ಮಹಿಳೆಯರ ಉದ್ಯೋಗ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಮಹಿಳಾ ಉದ್ಯಮಿ ಯೋಜನೆ ಜಾರಿಗೆ ತರಲಾಗಿದ್ದು, ಇದರಿಂದ ಸ್ವ–ಉದ್ಯೋಗ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಸಹಾಯವಾಗುತ್ತಿದೆ. ಆರೋಗ್ಯದ ದೃಷ್ಟಿಯಿಂದ ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ ಗರ್ಭಿಣಿ ಮಹಿಳೆಯರಿಗೆ ಅಗತ್ಯ ಪೋಷಕ ಆಹಾರ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ತಾಯಿಯ ಮತ್ತು ಶಿಶುವಿನ ಆರೋಗ್ಯವನ್ನು ಕಾಪಾಡುತ್ತದೆ. ಮಹಿಳಾ ಸ್ವಾಯತ್ತತೆ ಮತ್ತು ಆತ್ಮ ರಕ್ಷಣೆಗೆ ಮಹಿಳಾ ಶಕ್ತಿ ಕೇಂದ್ರ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಇದರಿಂದ ಮಹಿಳೆಯರು ಕಾನೂನು ಮತ್ತು ತಾಂತ್ರಿಕ ಮಾರ್ಗಸೂಚಿಗಳನ್ನು ಪಡೆದು ಸ್ವತಂತ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ. ಈ ಕಾರ್ಯಕ್ರಮಗಳು ಮಹಿಳೆಯರ ಅಭಿವೃದ್ಧಿಗೆ ಹೊಸ ಆಯಾಮವನ್ನು ಒದಗಿಸುತ್ತವೆ. ಮಹಿಳೆಯರು ಪ್ರಬಲರಾದಾಗ, ಸಮಾಜವೂ ಸಮಾನತೆಯನ್ನು ಕಾಪಾಡಿಕೊಂಡು ಸುಸ್ಥಿರ ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗುತ್ತದೆ. ಸದೃಢ ಮತ್ತು ಸಮಾನತೆಯ ಸಮಾಜ ನಿರ್ಮಾಣಕ್ಕೆ ಈ ಕಾರ್ಯಕ್ರಮಗಳು ಬಹುಮುಖ್ಯ ಭೂಮಿಕೆಯನ್ನು ವಹಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಎಮ್. ಎಮ್. ಮಂಟೂರ, ಡಾ. ಅರುಣ ವಾಯ್. ಕಾಂಬಳೆ, ಡಾ. ಬಿ. ಎನ್. ಜಾಧವ, ಡಾ. ಎಸ್. ಎಸ್. ಸಿದ್ದಾಪೂರ, ಎಸ್. ಕೆ. ಡೇಂಬರೆ, ಶ್ರೀಮತಿ ಸುಮಾ ವೈ.ಎನ್.,ಡಾ.ಸುನೀಲ ಮಣಕವಾಡ, ಶ್ರೀಮತಿ ಪಾಟೀಲ ಸವಿತಾ ಕಲಗೊಂಡ, ಡಾ. ಜಯಮ್ಮಾ,ಕು.ಶ್ರೀದೇವಿ ಕವಟಕೊಪ್ಪ,ಶ್ರೀಮತಿ ರಾಜಶ್ರೀ ರಾಯಣ್ಣವರ, ಶ್ರೀಮತಿ ಎಸ್. ಎಲ್. ಕೋಟ್ಯಾಳ, ಡಾ. ಎಮ್. ಎಮ್. ಅಂಬಲಿ, ಸಿ. ವಿ. ಗುಣದಾಳ, ಡಾ. ಡಿ. ಬಿ. ಚನ್ನಪ್ಪಗೋಳ, ಶ್ರೀಮತಿ ಅಶ್ವಿನಿ ಬಬಲಿ, ಕು. ಶಗುಪ್ತಾ ಬಿಸ್ತಿ, ಕು. ಸುಪ್ರಿಯಾ ಪಾಟೀಲ, ಕು. ಪುಷ್ಪಾ ಹೊಸಟ್ಟಿ ಹಾಗೂ ಮುಂತಾದವರು ಉಪಸ್ಥಿತರಿದ್ದರು. ಕು. ನಾಗಿಣಿ ದಾಸರ ಪ್ರಾರ್ಥಿಸಿದರು. ಕು. ಅಕ್ಷತಾ ಗಾಣಿಗೇರ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಕು. ಜಬೀನಾ ಮೌಲ್ವಿ ಮಾತನಾಡಿದರು. ಕು. ಸ್ವರೂಪಾ ನದಾಫ ಸೊಗಸಾಗಿ ನಿರೂಪಿಸಿದರು. ಶ್ರೀಮತಿ ಶಿವಲೀಲಾ ಹೆಚ್. ವಂದಿಸಿದರು.

# ಸರ್ಕಾರಿ ಪದವಿ ಕಾಲೇಜಿನಲ್ಲಿ ಮಹಿಳೆ ಮತ್ತು ಸಮಾನತೆ ಕುರಿತು ಚರ್ಚೆ

**ಜಮಖಂಡಿ :** ಮಾರ್ಚ್ ಐದರಂದು ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಘಟಕ, ಮಹಿಳಾ ಸಬಲೀಕರಣ ಹಾಗೂ ಐ.ಕ್ಯೂ.ಎ.ಸಿ. ಸಹಯೋಗದೊಂದಿಗೆ ಮಹಿಳಾ ಸಪ್ತಾಹದ ಅಂಗವಾಗಿ 'ಮಹಿಳೆ ಮತ್ತು ಸಮಾನತೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.



ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಚಿದಾನಂದ ಢವಳೇಶ್ವರ, ಸಹಾಯಕ ಪ್ರಾಧ್ಯಾಪಕರು, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ ಇವರು ಆಗಮಿಸಿದ್ದರು. ಅವರು ಸ್ತ್ರೀ ಸಮಾನತೆ ಎನ್ನುವುದು ಮೂಲಭೂತವಾದುದು. ಸಂವಿಧಾನದಲ್ಲೂ ಸಹ ಸಮಾನತೆಯನ್ನು ನೀಡಿರುವುದನ್ನು ಕಾಣುತ್ತೇವೆ. ಇಂದು ನಾವು ಮಹಿಳಾ ಸಬಲೀಕರಣ ಎನ್ನುವ ಹೆಸರನ್ನು ಕೇಳುತ್ತಿದ್ದೇವೆ. ಸಬಲೀಕರಣ ಎಂದರೆ ಆರ್ಥಿಕವಾಗಿ ಸಬಲವಾಗಬೇಕು. ಆರ್ಥಿಕವಾಗಿ ಬಲಾಢ್ಯವಾಗಬೇಕೆಂದರೆ ಶಿಕ್ಷಣವು ಬಹುಮುಖ್ಯವಾದ ಸಾಧನವಾಗಿದೆ. ಸ್ತ್ರೀ ಪುರುಷ ಅಥವಾ ಮಹಿಳಾ ಸಮಾನತೆ ನಾವು ಪ್ರಾಚೀನ ಕಾಲದಿಂದಲೂ ನೋಡುತ್ತಾ ಬಂದಾಗ ಆರ್ಥಿಕವಾಗಿ ಪುರುಷ ತನ್ನ ಹಿರಿಮೆಯನ್ನು ಪ್ರತಿಬಿಂಬಿಸುತ್ತಲೆ ಬಂದಿದ್ದಾನೆ. ಧಾರ್ಮಿಕ ವಿಚಾರಗಳನ್ನು ತೆಗೆದುಕೊಂಡಾಗ ಯಾವುದೇ ಧರ್ಮವು ಎಂದೂ ಅಸಮಾನತೆಯ ಬಗ್ಗೆ ವ್ಯಕ್ತಪಡಿಸಿಲ್ಲ. ಪ್ರತಿಯೊಂದು ಧರ್ಮವು ಸಮಾನತೆಯನ್ನು ಬಿಂಬಿಸುತ್ತವೆ. ಉದಾಹರಣೆಗೆ ಮುಸ್ಲಿಂ ಧರ್ಮ – ಮುಸ್ಲಿಂ ಧರ್ಮದ ಕುರಾನ್ ನಲ್ಲಿ ತಿಳಿಸಿರುವಂತೆ ಸ್ತ್ರೀ ಪುರುಷರು ಸರ್ವ ಸ್ವತಂತ್ರರರು. ಆದರೆ ಅದನ್ನು ವ್ಯಾಖ್ಯಾನಿಸುವಲ್ಲಿ ಮಹಿಳೆಯರಿಗೆ ಮಸೀದಿಯೊಳಗೆ ಪ್ರವೇಶವಿಲ್ಲವೆಂದು ವ್ಯಾಖ್ಯಾನಿಸಲಾಗಿದೆ. ಅದರಂತೆ ಕ್ರಿಶ್ಚನ್ ಧರ್ಮದ ಬೈಬಲ್ನಲ್ಲಿ ಕೂಡ ಸ್ತ್ರೀ ಪುರುಷರು ದೇವರನ್ನು ಪ್ರೀತಿಸುವಂತೆ ಗಂಡನನ್ನು ಹೆಂಡತಿ, ಹೆಂಡತಿಯನ್ನು ಗಂಡ ಪ್ರೀತಿಸಬೇಕೆಂದು ಹೇಳುತ್ತದೆ. ಹಿಂದೂ ಧರ್ಮದಲ್ಲಿ " ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾ ?ಯತ್ರೇಂತಾಸ್ತುನ ಪೂಜ್ಯಂತೇ ಸರ್ವಾಸ್ತತ್ರ ಫಲಾಃಕ್ರಿಯಾ ?" ಎಲ್ಲಿ ನಾರಿಯನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವಾನುದೇವತೆಗಳ ವಾಸ ಇರುತ್ತದೆ. ಮಹಿಳೆಯರು ಸಮಾಜದ ಮೂಲಭೂತ ಅಂಗವಾಗಿ ಪ್ರಾಚೀನ ಕಾಲದಿಂದಲೇ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸ್ಥಾನ ಹೊಂದಿದ್ದಾರೆ. ಆದಾಗ್ಯೂ, ಸತತವಾಗಿ ಮಹಿಳೆಯರು ಭಿನ್ನತೆಯನ್ನು ಎದುರಿಸುತ್ತಾ ಬಂದಿದ್ದಾರೆ. ಲಿಂಗ ಸಮಾನತೆ ಎಂಬುದು ಕೇವಲ ಮಹಿಳೆಯರ ಹಕ್ಕುಗಳ ಬಗ್ಗೆ ಮಾತ್ರವಲ್ಲ, ಸಮಗ್ರ ಸಮಾಜದ ಸಮತೋಲಿತ ಅಭಿವೃದ್ಧಿಗೆ ಅಗತ್ಯವಾದ ಮೂಲಭೂತ ತತ್ವವಾಗಿದೆ. ಸಮಾನತೆಯಿಲ್ಲದ ಸಮಾಜವು ನಿಜವಾದ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯೆ ಡಾ. ಸುನಂದಾ ಎಸ್. ಶಿರೂರ ಅವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಮಹಿಳೆಯರ ವಿರುದ್ಧ ಇರುವ ಅಸಮಾನತೆ, ಪ್ರಾಚೀನ ಪರಂಪರೆ, ವಿಭಿನ್ನ ನಂಬಿಕೆಗಳು ಮತ್ತು ಸಮಾಜದ ವಿಕೃತ ಮನೋಭಾವಗಳಿಂದ ಉಂಟಾಗಿದೆಯೆಂದು ಹೇಳಬಹುದು. ಕಾಲಾಂತರದಲ್ಲಿ ಮಹಿಳೆಯರು ಶಿಕ್ಷಣ, ಉದ್ಯೋಗ, ರಾಜಕೀಯ, ಕ್ರೀಡೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾರೆ. ಸಮಾನತೆ ಸಿಗಬೇಕಾದ ಅಂಶಗಳಲ್ಲಿ ಶಿಕ್ಷಣ ಬಹುಮುಖ್ಯವಾಗಿದೆ. ಒಂದು ಮಹಿಳೆ ಶಿಕ್ಷಣ ಹೊಂದಿದಾಗ, ಅದು ಕೇವಲ ಆಕೆಯ ಜೀವನಕ್ಕಷ್ಟೇ ಪರಿಮಿತವಾಗಿರದೆ, ಆಕೆಯ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಆದ್ದರಿಂದ, ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಇನ್ನೊಂದು ಪ್ರಮುಖ ಅಂಶವೆಂದರೆ ಉದ್ಯೋಗ ಕ್ಷೇತ್ರ. ಇಂದಿನ ಯುಗದಲ್ಲಿ ಮಹಿಳೆಯರು ವೈಜ್ಞಾನಿಕ, ತಾಂತ್ರಿಕ, ಆಡಳಿತಾತ್ಮಕ ಹುದ್ದೆಗಳಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದಾರೆ. ಆದರೆ, ಗಂಡಸರಿಗಿಂತ ಕಡಿಮೆ ಸಂಬಳ, ಪ್ರಗತಿಯ ಅವಕಾಶಗಳ ಕೊರತೆಗಳಂತಹ ಸಮಸ್ಯೆಗಳು ಇನ್ನೂ ಕೂಡ ಮುಂದುವರಿದಿವೆ. ಮಹಿಳೆಯರು ಸಮಾನ ಹಕ್ಕುಗಳನ್ನು ಪಡೆಯಲು ಸರ್ಕಾರ, ಖಾಸಗಿ ಸಂಸ್ಥೆಗಳು ಮತ್ತು ಸಮಾಜ ಎಲ್ಲರೂ ಜೊತೆಯಾಗಿ ಕಾರ್ಯ ನಿರ್ವಹಿಸಬೇಕು. ಮಹಿಳೆಯರಿಗಾಗಿ ರೂಪಿಸಿದ ಕಾನೂನುಗಳು ಮತ್ತು ಸರಕಾರದ ಯೋಜನೆಗಳು ಸಮಾನತೆ ನೀಡಲು ಸಹಾಯ ಮಾಡುತ್ತವೆ. ಮಹಿಳಾ ಮೀಸಲಾತಿ, ಗಂಡಸರೊಡನೆ ಸಮಾನ ವೇತನದ ನಿಯಮಗಳು, ಮತ್ತು ಕಾನೂನು ರಕ್ಷಣೆಗಳು ಈ ನಿಟ್ಟಿನಲ್ಲಿ ಮಹತ್ವದ ಹಂತಗಳು. ಆದರೆ ಕೇವಲ ಕಾನೂನುಗಳಿದ್ದರೆ ಸಾಕಾಗದು. ಸಮಾಜದಲ್ಲಿ ಪುರುಷರು ಹೆಣ್ಣನ್ನು ನೋಡುವ ದೃಷ್ಟಿಕೋನ ಬದಲಾದಾಗ ಮಾತ್ರ ನಿಜವಾದ ಸಮಾನತೆ ಹೆಣ್ಣಿಗೆ ದೊರೆಯುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ವಿ. ಆರ್. ದಳವಾಯಿ, ಡಾ. ಎಮ್. ಎಮ್. ಮಂಟೂರ, ಡಾ. ಅರುಣ ವಾಯ್. ಕಾಂಬಳೆ, ಡಾ. ಬಿ. ಎನ್. ಜಾಧವ, ಡಾ. ಎಸ್. ಎಸ್. ಸಿದ್ದಾಪೂರ, ಎಸ್. ಕೆ. ಡೇಂಬರೆ, ಶ್ರೀಮತಿ ಸುಮಾ ವೈ. ಎನ್., ಡಾ. ಸುನೀಲ ಮಣಕವಾಡ, ಶ್ರೀಮತಿ ಪಾಟೀಲ ಸವಿತಾ ಕಲಗೊಂಡ, ಡಾ. ಜಯಮ್ಮಾ, ಕು. ಶ್ರೀದೇವಿ ಕವಟಕೊಪ್ಪ, ಶ್ರೀಮತಿ ರಾಜಶ್ರೀ ರಾಯಣ್ಣವರ, ಶ್ರೀಮತಿ ಎಸ್. ಎಲ್. ಕೋಟ್ಯಾಳ, ಡಾ. ಎಮ್. ಎಮ್. ಅಂಬಲಿ, ಸಿ. ವಿ. ಗುಣದಾಳ, ಡಾ. ಡಿ. ಬಿ. ಚನ್ನಪ್ಪಗೋಳ, ಶ್ರೀಮತಿ ಅಶ್ವಿನಿ ಬಬಲಿ, ಕು. ಶಗುಪ್ತಾ ಬಿಸ್ತಿ, ಕು. ಸುಪ್ರಿಯಾ ಪಾಟೀಲ, ಕು. ಪುಷ್ಪಾ ಹೊಸಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಕು. ನಾಗಿಣಿ ದಾಸರ ಪ್ರಾರ್ಥಿಸಿದರು. ಕು. ಪಾಕೀಜಾಶೇಖಸ್ವಾಗತಿಸಿದರು.ಪ್ರಾಸ್ತಾವಿಕವಾಗಿ ಕು. ಜಬೀನಾ ಮೌಲ್ವಿ ಮಾತನಾಡಿದರು. ಡಾ. ಅಶ್ವಿನಿ ಬಿ. ಬಬಲಿ ಸೊಗಸಾಗಿ ನಿರೂಪಿಸಿದರು. ಶ್ರೀಮತಿ ಶಿವಲೀಲಾ ಹೆಚ್. ಕೊನೆಗೆ ವಂದಿಸಿದರು.

# ಶಾಲೆಗಳಿಗೆ ದೇಣಿಗೆ ನೀಡಿ: ಸಿದ್ದು ಸವದಿ

**ಮಹಾಲಿಂಗಪುರ :** ಶಾಲೆಗಳು ದೇವಾಲಯಗಳಿದ್ದಂತೆ. ದೇವಾಲಯಗಳ ಹುಂಡಿಗಳಲ್ಲಿ ಕಾಣಿಕೆ ಹಾಕುವ ಬದಲು ನಿಮ್ಮೂರಿನ ಶಾಲೆಗಳಿಗೆ ದೇಣಿಗೆ ನೀಡಿದರೆ, ಅದೇ ದೇಶ ಸೇವೆ ಮತ್ತು ಈಶ ಸೇವೆಯಾಗುತ್ತದೆ ಎಂದು ತೇರದಾಳ ಮತ ಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.



ಸಮೀಪದ ಸೈದಾಪುರ ಗ್ರಾಮದ ಬಸವೇಶ್ವರ ಶಿಕ್ಷಣ ಸಂಸ್ಥೆಯ ಎಕ್ಸಲೆಂಟ್ ಹಿರಿಯ ಪ್ರಾಥಮಿಕ ಶಾಲೆಯ ಮೊಗ್ಗಿನ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ಹೆಚ್ಚಿದೆ. ಆದ್ದರಿಂದ ಸ್ಪರ್ಧೆಯೂ ಹೆಚ್ಚಿದೆ. ಪಾಲಕರಿಗೂ ಶಿಕ್ಷಣದ ಮಹತ್ವ ತಿಳಿದಿದೆ. ಕೂಲಿ ಮಾಡಿದರೂ ಮಕ್ಕಳನ್ನು ಶಾಲೆಗೆ ಕಳಿಸುತ್ತಿರುವುದು ರಾಷ್ಟ್ರದ ಹಿತದೃಷ್ಟಿಯಿಂದ ಉತ್ತಮ. ಸಂಸ್ಥಾಪಕ ಶಿವಲಿಂಗ ಪೋಳ ಅವರ ಶ್ರಮ ಸಾರ್ಥಕವಾಗಲಿ ಎಂದರು. ಕಪರಟ್ಟಿ ಕಳ್ಳಿಗುದ್ದಿಯ ಮಹಾದೇವಾಶ್ರಮದ ಬಸವರಾಜ ಸ್ವಾಮೀಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ಸಂಸ್ಕಾರವಿಲ್ಲದ ಶಿಕ್ಷಣ ವ್ಯರ್ಥ. ತಂದೆ, ತಾಯಿ, ಗುರುವನ್ನು ಗೌರವಿಸುವ ಶಿಕ್ಷಣ ನೀಡಿದರೆ ಭಾರತ ವಿಶ್ವಗುರುವಾಗಲು ಸಾಧ್ಯ ಎಂದರು.

ಸಂಸ್ಥೆಯ ಅಧ್ಯಕ್ಷ ಶಿವಲಿಂಗ ಪೋಳ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾಲಿಂಗಪ್ಪ ಸನದಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಮಹಾಂತೇಶ ಹಿಟ್ಟಿನಮಠ, ಬಸವರಾಜ ಮಾನೆ, ಸುಹಾಸ ಇಂಗಳೆ, ಎಸ್. ಟಿ. ಪೋಳ ಮಾತನಾಡಿದರು. ನಾರನಗೌಡ ಉತ್ತಂಗಿ ಉಪನ್ಯಾಸ ನೀಡಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.


ಪಿಕೆಪಿಎಸ್ ಅಧ್ಯಕ್ಷ ಬಸವಣ್ಣೆಪ್ಪ ಬ್ಯಾಳಿ, ಬಸವರಾಜ ನಾಗನೂರ, ವಿನಯ ಹೆಗ್ಗಳಗಿ, ಶಿವಪ್ಪ ಬಾಯಪ್ಪಗೋಳ, ಪಿಯೂಷ ಓಸ್ವಾಲ, ಆನಂದ ಬನಹಟ್ಟಿ, ಮುತ್ತನಾಯಕ ನಾಯಕ, ಬಸಪ್ಪ ಉಳ್ಳಾಗಡ್ಡಿ, ಮಲ್ಲನಗೌಡ ಪಾಟೀಲ, ಆರ್. ಕೆ. ನದಾಫ, ಮಹಾಲಿಂಗಪ್ಪ ಬಾಯಪ್ಪಗೋಳ, ಶಿವಪ್ಪ ಹೋಳ್ಕರ್, ಪುಂಡಲೀಕ ಕೌಜಲಗಿ, ಸಿದ್ಧಾರೂಢ ಕೌಜಲಗಿ, ಕವಿತಾ ಕಾಂಬಳೆ, ತುಳಸವ್ವ ಲಮಾಣಿ, ರಾಮು ಪೋಳ ಉಪಸ್ಥಿತರಿದ್ದರು.

ಶಿಕ್ಷಕಿಪಾಲಿಕಾರುವರದಿವಾಚಿಸಿದರು. ಮುಖ್ಯೋಪಾಧ್ಯಾಯ ಎಸ್. ಎಂ. ಚವ್ಹಾಣ, ಶಿಕ್ಷಕಿ ಅಶ್ವಿನಿ ಸ್ವಾಗತಿಸಿ ನಿರೂಪಿಸಿದರು.

# ಕುರ್‌ಆನ್

ಕುರಾನ್, ಅಲ್ ಫುರಕಾನ(ಪ್ರಸಿದ್ಧಗ್ರಂಥ), ಕಲಾಂ ಉಲ್ಲಾ (ದೇವನ ನುಡಿ), ಕಿತಾಬ್(ಪವಿತ್ರ ಗ್ರಂಥ),ಅಲ್ ಹುದಾ(ಮಾರ್ಗದರ್ಶಕ) ಶುಚಿ ಸ್ನಾನವಿಲ್ಲದೆ, ಕೈತೊಳೆಯದೆ ಇದನ್ನು ಓದುವಂತಿಲ್ಲ, ಮುಟ್ಟುವಂತೆಯೂ ಇಲ್ಲ ಇದು ಇಸ್ಲಾಂ ಮತದ ಶಾಶ್ವತ ಪವಾಡ ಗ್ರಂಥ ಪರಮಾತ್ಮನನ್ನು ಕಾಣಲು, ಮುಕ್ತಿಯನ್ನು ಪಡೆಯಲು ಶ್ರೇಷ್ಠಮಾರ್ಗದರ್ಶಿಯೆಂದೂ ಪರಿಗಣಿತವಾಗಿದೆ ಉದಾತ್ತ ಸತ್ಯವನ್ನು ವ್ಯಾಖ್ಯಾನಿಸುವ ಗ್ರಂಥ ಇದು. ದೇವ ಲಿಪಿಕಾರರಿಂದ ಲಿಖಿತವಾದ, ಶ್ರೀಮಂತವಾದ ಮತ್ತು ಸ್ವಯಂಪೂರ್ಣವಾದ ಗ್ರಂಥವೆಂದೂ ಹೇಳಲಾಗಿದೆ. ಇಡೀ ಗ್ರಂಥ ಪೂರ್ಣವಾಗಿ ಸ್ವರ್ಗದಲ್ಲಿ ಇರಿಸಲ್ಪಟ್ಟಿದ್ದು, ತರುವಾಯ ಅವಶ್ಯಕತೆ ಉಂಟಾದಾಗಲೆಲ್ಲ ಇಪ್ಪತ್ತಮೂರುವರ್ಷಗಳ ವಿವಿಧ ಕಾಲಗಳಲ್ಲಿ, ಇದನ್ನು ಪಡೆಯುವುದಕ್ಕಾಗಿಯೇ ವಿವಿಧ ರೂಪಗಳಲ್ಲಿ, ಧರೆಗಿಳಿದ ಪ್ರಮುಖ ದೇವದೂತ ಜಿಬರಿಯಲ್ ಮೂಲಕ ಮೊಹಮ್ಮದ್(ಸ.ಅ.ಸ) ಅವರ ಮೇಲೆ ಬಿಡುಗಡೆಗೊಳಿಸಲಾಗಿದೆ.

ಕುರಾನ್‌ಮೂವತ್ತುಭಾಗಗಳಾಗಿವಿಂಗಡಣೆಯಾಗಿದ್ದು ಅದನ್ನು(ಪಾರಾ)ಎಂದುಕರೆಯುತ್ತಾರೆ.30ಪಾರಾದಲ್ಲಿ ಸಂಪೂರ್ಣ ಕುರಾನ್ ಇದೇ 114 ಸುರಹಾ ಅಧ್ಯಾಯ ಗಳನ್ನೊಳಗೊಂಡಿದೆ ಪ್ರತಿಯೊಂದು ಭಾಗವೂ ನಾಲ್ಕು ಉಪವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಸಂಪೂರ್ಣ



ಕುರಾನ್ ಅನ್ನು ಕಂಠಪಾಠ ಮಾಡಿದವರ ಗೆ ಹಾಫೀಜ್ ಇ ಕುರಾನ್ ಎಂದು ಕರೆಯಲಾಗುತ್ತದೆ ಕಳೆದ ಸಾವಿರದ ನಾಲ್ಕುನೂರು ವರ್ಷಗಳಿಂದಲೂ ಯಾವ ಬದಲಾವಣೆಯೂ ಇಲ್ಲದೆ ತನ್ನ ಪವಿತ್ರತೆಯನ್ನು ಉಳಿಸಿಕೊಂಡು ಬಂದಿದೆ. ಮೊದಲು ಅರಬಿಕ್ ಭಾಷೆಯಲ್ಲಿ ಇತ್ತು ಈಗ ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಓದಲಿಕ್ಕೆ ಲಭ್ಯವಿದೆ ಪ್ರಾರಂಭಿಕ ಅಧ್ಯಾಯ ಒಂದನೆಯ ಅಧ್ಯಾಯವನ್ನು ಸುರೇ ಫಾತಿಹಾ ಎಂದು ಕರೆಯುತ್ತಾ–ರೆ.ರಚನಾ ಸೌಂದರ್ಯವಷ್ಟೇ ಅಲ್ಲದೆ ಕುರಾನಿನಲ್ಲಿ ಸೃಷ್ಟಿಯ ಐಕ್ಯತೆ ಹಾಗೂ ಪರಮಾತ್ಮನ ಏಕಸ್ವರೂಪದ ವಿಷಯದಲ್ಲಿ ಮೂಲ ಕಲ್ಪನೆಗಳಿವೆ ಭೂಮಿ, ಆಕಾಶ, ಪರ್ವತ,ಸಮುದ್ರ, ಸೂರ್ಯ, ಚಂದ್ರ, ಸೃಷ್ಟಿಸಿದವ, ಸ್ವಯಂ ಅಸ್ತಿತ್ವ ಹೊಂದಿ ದೇವತೆಗಳನ್ನೂ ಮಾನವರನ್ನೂ ಜಗತ್ತಿನ ಎಲ್ಲ ಜೀವರಾಶಿಗಳನ್ನೂ ಸೃಷ್ಟಿಸಿದವ ಒಬ್ಬನೇ ಒಬ್ಬ ದೇವ ಅಲ್ಲಾಹ ಎಂದು ಕುರಾನ್ ತಿಳಿಸುತ್ತದೆ.

**ವರದಿ : ಸೈಯದ್ ಸಿರಾಜ್ ಖಾಜಿ**

# ಸಂಸ್ಕಾರಯುತ ಶಿಕ್ಷಣ ಇಂದಿನ ಅಗತ್ಯ: ಬಿ.ಎಂ. ಹಳಮನಿ

**ಚಿಮ್ಮಡ :** ಇಂದಿನ ಆಧುನಿಕ ಯುಗದಲ್ಲಿ ಶಿಕ್ಷಣ ಹಾಗೂ ಸಂಸ್ಕಾರ ವಿದ್ಯಾರ್ಥಿಗಳಿಗೆ ಅಮೂಲ್ಯವಾಗಿದ್ದು ಸಂಸ್ಕಾರಯುತ ಶಿಕ್ಷಣ ಮಕ್ಕಳ ಭವಿಷ್ಯದ ಗುರಿ ತಲುಪಿಸುವ ಸಾಧನಗಳಾಗಬೇಕೆಂದು ಶಿಕ್ಷಣ ಸಂಯೋಜಕ ಬಿ.ಎಂ. ಹಳಮನಿ ಹೇಳಿದರು.



ಗ್ರಾಮದ ಸರಕಾರಿ ಕನ್ನಡ ಹೆಣ್ಣು ಮಕ್ಕಳ ಮಾದರಿ ಪ್ರಾಥಮಿಕ ಶಾಲೆಯ ಕವಿ ಚಕ್ರವರ್ತಿ ರನ್ನ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 8ನೇ ವರ್ಗದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅಥಿತಿಗಳಾಗಿ ಆಗಮಿಸಿ ಮಾತನಾಡಿದ ಅವರು ಮಕ್ಕಳಿಗೆ ಕಲಿಕೆಯ ಜೊತೆಗೆ ನೈತಿಕ ಶಿಕ್ಷಣ ನೀಡಬೇಕು, ಸರಕಾರ ಹೆಣ್ಣು ಮಕ್ಕಳ ಕಲಿಕೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು, ಗ್ರಾಮೀಣ ಭಾಗಗಳಲ್ಲಿಯೂ ಕೂಡ ಪದವಿ ಪಡೆಯುವ ಶೈಕ್ಷಣಿಕ ವಾತಾವರಣ ಸೃಷ್ಟಿಸಲಾಗಿದ್ದು, ಹೆಣ್ಣುಮಕ್ಕಳು ಯಾವ ಕಾರಣಕ್ಕೂ ಶಿಕ್ಷಣವನ್ನು ಮೊಟಕು ಗೊಳಿಸಬಾರದು ಎಂದರು.

ಯುವ ಮುಖಂಡ ಪ್ರವೀಣ ಪೂಜಾರಿ ಮಾತನಾಡಿ, ಹೆಣ್ಣು ಮನಸ್ಸು ಮಾಡಿದರೆ ಯಾವುದೇ ಸಾಧನೆ ಸಾಧಿಸಬಲ್ಲಳು, ಅದಕ್ಕೆ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಇಂದಿರಾಗಾಧಿ, ಸಾವಿತ್ರಿಬಾಯಿ ಪುಲೆ ರಂತಹ ನೂರಾರು ಸಾಧಕರ ಇತಿಹಾಸವಿದ್ದು ಅವರ ಸಾಧನೆಯ ಕುರಿತ ಅದ್ಯಯಣ ಮಾಡುವ ಮೂಲಕ ದೇಶಕ್ಕೆ ಗ್ರಾಮಕ್ಕೆ ಪ್ರತಿಯೊಬ್ಬರು ತಮ್ಮ ಕೊಡುಗೆ ನೀಡಬೇಕೆಂದರು.

ಸಿಆರ್‌ಪಿ ಸಮನ್ವಯ ಅಧಿಕಾರಿ ದ್ರಾಕ್ಷಾಯಿಣಿ ಮಂಡಿ, ಸರಕಾರಿ ಪ್ರೌಢಶಾಲೆಯ ಮುಖ್ಯೋಪಾದ್ಯಾಯೆ ಎಂ.ಎಸ್. ಜಿಟ್ಟಿ, ಶಿಕ್ಷಕ ಡಿ.ಪಿ. ಪರೀಟ, ಶಾಲೆಯ ಮುಖ್ಯ ಗುರು ಎಸ್.ಎ. ಬಿರಾದರ ಮಾತನಾಡಿದರು.

ಇದೇ ಸಂಧರ್ಬದಲ್ಲಿ ಮಾದರಿ ಶಾಲೆಯ ವಿದ್ಯಾರ್ಥಿನಿಯರಿಂದ ಪ್ರಸ್ತುತಪಡಿಸಲಾದ ಇಂಗ್ಲಿಷ ನಾಟಕ ಸಭಿಕರನ್ನು ಮಂತ್ರಮುಗ್ದರನ್ನಾಗಿಸಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ಪ್ರಭು ದೇವಗೋಳ ವಹಿಸಿದ್ದರು. ಉದ್ಘಾಟಣೆಯನ್ನು ಗ್ರಾ.ಪಂ. ಅಧ್ಯಕ್ಷೆ ಬಂಗಾರೆವ್ವ ಜಾಲಿಕಟ್ಟಿ ನೆರವೇರಿಸಿದರು.

ಉಪಾಧ್ಯಕ್ಷೆ ಪದ್ಮಾವತಿ ಭಜಂತ್ರಿ, ಗ್ರಾ.ಪಂ. ಸದಸ್ಯೆ ಮೇಘಾ ಗಾಣಿಗೇರ,ಬಾಳಪ್ಪಾಗಡೆಪ್ಪನವರ, ಶ್ರೀಮತಿ ಅನ್ನಪೂರ್ಣ ಅಥಣಿ, ಶ್ರೀಶೈಲ ಮಠಪತಿ, ಪಿರಸಾಬ ನದಾಫ, ಅಶೋಕ ಚಿಮ್ಮಡ, ಇಮಾಮ ಯಾದವಾಡ, ಪರಶುರಾಮ ಬಜಂತ್ರಿ ಸೇರಿದಂತೆ ಹಲವಾರು ಜನ ಪ್ರಮುಖರು ಆಗಮಿಸಿದ್ದರು.

ಕಾರ್ಯಕ್ರಮಕ್ಕೆ ಕಾರ್ಯಕ್ರಮಕ್ಕೆ ಶಿಕ್ಷಕ ಎಸ್.ವೈ. ಬಂಗಾರಿ ಸ್ವಾಗತಿಸಿದರು, ಕು. ಲಕ್ಷ್ಮಿ ಕರಡಿ ನಿರೂಪಿಸಿದರು, ಜೆ.ಎಸ್. ಗಡೆನ್ನವರ ವಂದಿಸಿದರು.

# ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ 2025–2026ನೇ ಸಾಲಿನ ಬಜೆಟ್ ಜನಪರವಾಗಿದೆ: ಶಾಸಕ ಕಾಶಪ್ಪನವರ



**ಇಲಕಲ್ :** ಹುನಗುಂದ ಮತಕ್ಷೇತ್ರದ ಶಾಸಕರಾದ ವಿಜಯಾನಂದ ಕಾಶಪ್ಪನವರ ಅವರು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮಂಡಿಸಿರುವ 2025–2026ನೇ ಸಾಲಿನ ಬಜೆಟ್ ಜನಪರವಾಗಿದೆ ಈ ಬಾರಿಯ ಬಜೆಟ್ ಗಾತ್ರ ನಾಲ್ಕು ಲಕ್ಷ ಕೋಟಿ ರೂ ಗಳ ಆಗಿದೆ.

ವಿಶೇಷವಾಗಿ ಹುನಗುಂದ ಮತಕ್ಷೇತ್ರಕ್ಕೆ ಬಜೆಟ್ ನಲ್ಲಿ ರಾಮಥಾಳ ನೀರಾವರಿ,ಹಾಗೂ ಬಸವ ಅಂತರಾಷ್ಟ್ರೀಯ ಕೇಂದ್ರಕ್ಕೆ ಅಭಿವೃದ್ಧಿಪಡಿಸುವದು, ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂಸಿಎಚ್ ಆಸ್ಪತ್ರೆ), ಆರೋಗ್ಯ ಇಲಾಖೆಯಿಂದ ಮಂಜೂರಾತಿ ನೀಡಿ–ದ್ದು ,, ಸಂಪೂರ್ಣ ರಾಜ್ಯದ ಸರ್ವಾಂಗಿನ ಅಭಿವೃದ್ಧಿ ಹಿತದೃಷ್ಟಿಯಿಂದ ಮಂಡಿಸಿದ ಜನಪರ ಬಜೆಟ್ ಇದು ಆಗಿದೆ ಕ್ಷೇತ್ರದ ಜನತೆಯ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳು ಸಲ್ಲಿಸುತ್ತೇನೆ ಎಂದು ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಬಜೆಟ್ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

**ವರದಿ : ಸೈಯದ್ ಸಿರಾಜ್ ಖಾಜಿ**

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618